ಅಧ್ಯಾತ್ಮಗ್ರಂಥಾವಳಿ

# ಸ್ವಾತ್ಮಪ್ರಕಾಶಿಕಾ

(ಮೂಲ, ಅನುವಾದ, ಟಿಪ್ಪಣಿ, ಪರಿಶಿಷ್ಟಗಳ ಸಮೇತ)

ಸಂಸ್ಕರಿಸಿದವರು :

**ವೈ. ಸುಬ್ಬರಾವ್**

(ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳ ಪೂರ್ವಾಶ್ರಮದ ಹೆಸರು)

ಕ್ರಮಾಂಕ : ೬೬

**ಪ್ರಕಾಶಕರು :**

ಅಧ್ಯಾತ್ಮಪ್ರಕಾಶಕಾರ್ಯಾಲಯ

ಹೊಳೆನರಸೀಪುರ - 573211

2000

ಮೊದಲನೆಯ ಮುದ್ರಣ 1937 (೧೦೦೦ ಪ್ರತಿಗಳು)
ಎರಡನೆಯ ಮುದ್ರಣ 2000 (೧೦೦೦ ಪ್ರತಿಗಳು)

ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು.
All Rights Reserved

ಅಕ್ಷರ ಜೋಡಣೆ :
**ಪ್ರಶಾಂತ್ ಎಂಟರ್‌ಪ್ರೈಸಸ್**
ನಂ. ೨೧೩, ಬಾಲಾಜಿ ರಸ್ತೆ,
ತ್ಯಾಗರಾಜನಗರ, ಬೆಂಗಳೂರು - ೨೮
ದೂರವಾಣಿ : ೬೭೬೭೦೧೬

ಮುದ್ರಕರು :
**ಶ್ರೀಗಣೇಶ್ ಮಾರುತಿ ಪ್ರಿಂಟರ್ಸ್**
ನಂ. 76, 3ನೇ ಬ್ಲಾಕ್, 6ನೇ ಮುಖ್ಯರಸ್ತೆ
ತ್ಯಾಗರಾಜನಗರ, ಬೆಂಗಳೂರು - 28
ದೂರವಾಣಿ : 6528542

# ಮುನ್ನುಡಿ

ಅಧ್ಯಾತ್ಮಪ್ರಕಾಶಕಾರ್ಯಾಲಯದ ಸಂಸ್ಥಾಪಕರಾದ ಬ್ರಹ್ಮೀಭೂತ ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರ ಎಲ್ಲಾ ಗ್ರಂಥಗಳೂ ಎಲ್ಲಾ ಕಾಲದಲ್ಲೂ ವಾಚಕರಿಗೆ ದೊರೆಯುತ್ತಿರಬೇಕೆಂಬ ಸದುದ್ದೇಶದಿಂದ ಆಯಾ ಕಾಲಕ್ಕೆ ಪ್ರತಿಗಳು ಮಾರಾಟವಾದ ಗ್ರಂಥಗಳನ್ನೆಲ್ಲ ಪುನರ್ಮುದ್ರಣ ಮಾಡಿಸಿ ವಾಚಕರಿಗೆ ಅರ್ಪಿಸಲಾಗುತ್ತಿದೆ. ಈ ಯೋಜನೆಯಂತೆ **ಎರಡನೆಯ** ಬಾರಿಗೆ ಈ ಗ್ರಂಥವನ್ನು ಪುನರ್ಮುದ್ರಿಸಿ ವಾಚಕರಿಗೆ ಸಮರ್ಪಿಸಲಾಗಿದೆ.

ಈ ಗ್ರಂಥದ ಪೂರ ಮುದ್ರಣದ ವೆಚ್ಚವನ್ನು ಕಾರ್ಯಾಲಯದ ಭಕ್ತರಾದ ಶ್ರೀ ಬಿ. ಪಿ. ಶ್ರೀನಿವಾಸ್‌ಮೂರ್ತಿಗಳವರು ವಹಿಸಿಕೊಂಡು, ತಮ್ಮ ಮಾತಾಪಿತೃಗಳಾದ ದಿ|| ಗಂಗಮ್ಮ ಪುಟ್ಟವೆಂಕಟಪ್ಪನವರ ಸ್ಮರಣಾರ್ಥ ಭಕ್ತಾದಿಗಳ ಅನುಕೂಲಕ್ಕಾಗಿ ಅಧ್ಯಾತ್ಮಪ್ರಕಾಶಕಾರ್ಯಾಲಯದ ಮೂಲಕ ಪ್ರಕಾಶನಗೊಳಿಸಿರುತ್ತಾರೆ.

ಇವರಿಗೂ ಮತ್ತು ಈ ಪುಸ್ತಕ ಹೊರಬರಲು ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಹಕರಿಸಿದ ಎಲ್ಲಾ ಗುರುಭಕ್ತವೃಂದದವರಿಗೂ ಕಾರ್ಯಾಲಯದ ಪರವಾಗಿ ಕೃತಜ್ಞತಾ ಪೂರ್ವಕ ಅಭಿನಂದನೆಗಳನ್ನು ಸಮರ್ಪಿಸಲಾಗಿದೆ.

ಹೊಳೆನರಸೀಪುರ **ಪ್ರಕಾಶಕರು**

18. 12. 2000

# ಪೀಠಿಕೆ

ಶ್ರೀಶಂಕರಾಚಾರ್ಯರವರ ಕೃತಿಯೆಂದು ಪ್ರಸಿದ್ಧವಾಗಿರುವ ಅನೇಕ ಪ್ರಕರಣಗಳಲ್ಲಿ ಇದೂ ಒಂದಾಗಿರುತ್ತದೆ. **ನಮ್ಮಗಳ ಆತ್ಮನಲ್ಲಿ ಯಾವ ಸಂಸಾರದ ಸೆಲೆಯೂ** ಇಲ್ಲವೆಂಬುದನ್ನು ಮನಸ್ಸಿಗೆ ತಂದುಕೊಳ್ಳುವದಕ್ಕೆ ಇಲ್ಲಿ ಒಳ್ಳೊಳ್ಳೆಯ ವಿಚಾರತರಂಗಗಳು ಇರುತ್ತವೆ. ಕೊನೆಯಲ್ಲಿ (೬೮ನೆಯ ಶ್ಲೋಕದಲ್ಲಿ) **ತತ್ತ್ವವಿಚಾರಾಬ್ಧಿ** ಎಂಬ ಶಬ್ದವಿದೆ ; ಈ ಪ್ರಕರಣಕ್ಕೆ ಅದೇ ಹೆಸರು ಇದ್ದರೂ ಇರಬಹುದೆಂದು ತೋರುತ್ತದೆ. **ಸ್ವಾತ್ಮಪ್ರಕಾಶಿಕಾ** (ತನ್ನ ಆತ್ಮನ ಸ್ವರೂಪವನ್ನು ಬೆಳಕಿಗೆ ತರುವ ಗ್ರಂಥ) ಎಂಬ ಹೆಸರನ್ನು ಹೇಗೆ ಯಾವಾಗ ಯಾರು ಇಟ್ಟರೋ ತಿಳಿಯದು.

ಗ್ರಂಥದಲ್ಲಿ ಭಾಷ್ಯಕಾರರ ಪ್ರಸಿದ್ಧವಾದ ಯುಕ್ತಿಗಳು ಕಂಡು ಬರುವದಿಲ್ಲ ; ಶೈಲಿಯೂ ಅಷ್ಟು ಪ್ರೌಢವಾಗಿಲ್ಲ ; ವರಾಹೋಪನಿಷತ್ತಿನಲ್ಲಿರುವ ಕೆಲವು ಶ್ಲೋಕಗಳು ಇಲ್ಲಿ ಕಂಡುಬರುತ್ತವೆ ; ಈಚಿನ ವೇದಾಂತಿಗಳ ಗ್ರಂಥಗಳಲ್ಲಿ ಬಳಕೆಯಲ್ಲಿರುವ ಶಬ್ದಪ್ರಯೋಗಗಳು ಹೇರಳವಾಗಿವೆ. ಇಲ್ಲಿ ಶಿಷ್ಯನು ಕೇಳಿರುವ ಪ್ರಶ್ನೆಯಲ್ಲಿ 'ಅಜ್ಞಾನವು ಜಗತ್ಕಾರಣ, ಅದು ಒಂದೇ, ಸಾಕ್ಷಿಯು ಒಬ್ಬನೇ, ಪ್ರಪಂಚವು ಆತ್ಮನ ವಿವರ್ತವು- ಎಂಬುದನ್ನು ಮೂರುಲೋಕದವರೂ ಬಲ್ಲರು' ಎಂದಿದೆ ; ಆದರೆ 'ಅಜ್ಞಾನವು ಒಂದೊ, ಅನೇಕವೊ ? ಸಾಕ್ಷಿಯು ಒಬ್ಬರೊ, ಅನೇಕರೊ ?' ಎಂಬ ವಿಷಯದ ಚರ್ಚೆಯು ಭಾಷ್ಯದಲ್ಲಿ ಎಲ್ಲಿಯೂ ಕಾಣಬರುವದಿಲ್ಲ ; 'ವಿವರ್ತ', 'ಪರಿಣಾಮ'- ಎಂಬ ಶಬ್ದಗಳು ಭಾಷ್ಯದಲ್ಲಿ ಪರ್ಯಾಯಗಳಾಗಿರುತ್ತವೆ. ಈ ಪ್ರಕರಣದ ೩೪-೫೮ನೆಯ ಶ್ಲೋಕಗಳಲ್ಲಿರುವ ವರ್ಣನೆಯು ಭಾಷ್ಯವಿರುದ್ಧವಾಗಿದೆ. ಗ್ರಂಥದಲ್ಲಿ ಅಲ್ಲಲ್ಲಿ ಪಾಠಭೇದವೂ ಕಂಡುಬರುತ್ತದೆ. ಈ ಎಲ್ಲಾ ಕಾರಣಗಳಿಂದ ಇದು ಆಚಾರ್ಯರ ಕೃತಿ ಎನ್ನುವದಕ್ಕೆ ಅಡಚಣೆಗಳಿವೆ. ಅಲ್ಲಲ್ಲಿ ಕೊಟ್ಟಿರುವ ಟಿಪ್ಪಣಿಗಳಲ್ಲಿ ಇದನು ತಿಳಿಸಿರುತೇನೆ:

ಪುಸ್ತಕದ ಕೊನೆಯಲ್ಲಿ ಶ್ಲೋಕಗಳ ಅನುಕ್ರಮಣಿಕೆಯಲ್ಲದೆ, ಸೂತ್ರಭಾಷ್ಯದಲ್ಲಿ ಜೀವೇಶ್ವರವರ್ಣನೆಯಿರುವ ಭಾಗಗಳ ಅನುವಾದದ ಪರಿಶಿಷ್ಟವನ್ನೂ, ಗ್ರಂಥದಲ್ಲಿ ಉಪಯೋಗಿಸಿರುವ ಉಪಮಾನಗಳ ಪಟ್ಟಿಯನ್ನೂ, ಒಂದು ಶಬ್ದಾನುಕ್ರಮಣಿಕೆಯನ್ನೂ ಕೊಟ್ಟಿರುತ್ತೇನೆ. ಇದರಿಂದ ಗ್ರಂಥದ ನಿಜವಾದ ಯೋಗ್ಯತೆಯು ಗೊತ್ತಾಗುವದಕ್ಕೆ ಸಹಾಯವಾಗುವದಲ್ಲದೆ ಗ್ರಂಥಕರ್ತರ ಶೈಲಿ, ಕಾಲ- ಮುಂತಾದವುಗಳನ್ನು ನಿರ್ಣಯಿಸುವದಕ್ಕೂ ಸಹಾಯವಾದೀತೆಂಬ ಆಶೆಯಿದೆ.

ವೇದಾಂತಾರ್ಥವನ್ನು ಮನನಮಾಡಬೇಕೆಂಬ ಜಿಜ್ಞಾಸುಗಳಿಗೂ ಆಚಾರ್ಯರ ನಿಜವಾದ ಗ್ರಂಥಗಳು ಯಾವವೆಂಬುದನ್ನು ನಿರ್ಧರಿಸಬೇಕೆಂಬ ಶೋಧಕರಿಗೂ ಈ ಪ್ರಕಟನೆಯು ಪ್ರಯೋಜನಕರವಾಗಿರುವದೆಂದು ನಂಬುತ್ತೇನೆ.

ಈ ಪ್ರಕರಣವನ್ನು ಮೊದಲಿಂದ ಕೊನೆಯವರೆಗೂ ನೋಡಿ ಪಾಠಾಂತರಗಳನ್ನೂ ಕೆಲವು ಉಪಯುಕ್ತವಾದ ಸೂಚನೆಗಳನ್ನೂ ಕೊಟ್ಟಿರುವದಕ್ಕಾಗಿ **ಬ್ರ || ಶ್ರೀ || ಎಸ್. ವಿಠ್ಠಲಶಾಸ್ತ್ರಿಗಳು,** ವೇದಾಂತಶಿರೋಮಣಿ, ವೇದಾಂತವಿಶಾರದ, ವಿದ್ಯಾವಾಚಸ್ಪತಿ- ಇವರಿಗೆ ನಾನು ಕೃತಜ್ಞನಾಗಿರುತ್ತೇನೆ.

ಪ್ರಮಾಥಿ ಸಂವತ್ಸರ **ಸಂಸ್ಕರ್ತ**

(1939)

# ವಿಷಯಾನುಕ್ರಮಣಿಕೆ


| | ಪುಟ |
|---|---|
| **ಪೀಠಿಕೆ** | iv |
| **ಸ್ವಾತ್ಮಪ್ರಕಾಶಿಕಾ-** | |
| **ಸಂಸ್ಕೃತಮೂಲ, ಅನುವಾದ, ಟಿಪ್ಪಣಿಗಳೊಡನೆ** | ೧-೨೪ |
| **ಪರಿಶಿಷ್ಟಗಳು :** | |
| ೧. ಸೂತ್ರಭಾಷ್ಯದಲ್ಲಿ ಜೀವೇಶ್ವರವರ್ಣನೆ | ೨೫ |
| ೨. ಗ್ರಂಥದಲ್ಲಿ ಉಪಯೋಗಿಸಿರುವ ಉಪಮಾನಗಳ ಪಟ್ಟಿ. | ೨೮ |
| ೩. ಶಬ್ದಾನುಕ್ರಮಣಿಕೆ | ೨೯ |
| ೪. ಶ್ಲೋಕಾದ್ಯ ಪಾದಾನುಕ್ರಮಣಿಕೆ | ೩೧ |

|| ಓಮ್ ||

# ಸ್ವಾತ್ಮಪ್ರಕಾಶಿಕಾ

**ಜಗತ್ಕಾರಣಮಜ್ಞಾನಮೇಕಮೇವ ಚಿದನ್ವಿತಮ್ ।**
**ಏಕ ಏವ ಮನಃಸಾಕ್ಷೀ ಜಾನಾತ್ಯೇವ★ ಜಗತ್ತ್ರಯಮ್ ॥೧॥**

**ವಿವೇಕಯುಕ್ತಬುದ್ಧ್ಯಾಹಂ ಜಾನಾಮ್ಯಾತ್ಮಾನಮದ್ವಯಮ್ ।**
**ತಥಾಪಿ ಬನ್ಧಮೋಕ್ಷಾದಿವ್ಯವಹಾರಃ ಪ್ರತೀಯತೇ ॥೨॥**

**ವಿವರ್ತೋಽಪಿ ಪ್ರಪಞ್ಚೋ ಮೇ ಸತ್ಯವದ್ಭಾತಿ ಸರ್ವದಾ ।**
**ಇತಿ ಸಂಶಯಪಾಶೇನ ಬದ್ಧೋಽಹಂ ಛಿನ್ಧಿ ಸಂಶಯಮ್ ॥೩॥**

೧-೩. ಚೈತನ್ಯದಿಂದೊಡಗೂಡಿ ಜಗತ್ತಿಗೆ ಕಾರಣವಾಗಿರುವ ಅಜ್ಞಾನವು ಒಂದೇ; ಮನಸ್ಸನ್ನು ನೋಡುವ ಸಾಕ್ಷಿಯೂ ಒಬ್ಬನೇ. ಇದನ್ನು ಮೂರುಲೋಕವೂ ಬಲ್ಲದು. ವಿವೇಕದಿಂದ ಕೂಡಿದ ಬುದ್ಧಿಯಿಂದ ನಾನು ಅದ್ವಯನಾದ ಆತ್ಮನನ್ನು ಅರಿತುಕೊಂಡಿರುವೆನು. ಹೀಗಿದ್ದರೂ ಬಂಧ, ಮೋಕ್ಷ- ಮುಂತಾದ ವ್ಯವಹಾರವು ತೋರುತ್ತಿರುವದಲ್ಲ! ಪ್ರಪಂಚವು ಆತ್ಮನ ವಿವರ್ತವೇ ಆದರೂ ನನಗೆ ಯಾವಾಗಲೂ ಸತ್ಯವಾಗಿರುವಂತೆ ತೋರುವದಲ್ಲ! ಈ ಸಂಶಯವೆಂಬ ಹಗ್ಗಕ್ಕೆ ನಾನು ಕಟ್ಟುಬಿದ್ದಿರುತ್ತೇನೆ. ಈ ಸಂಶಯವನ್ನು ಕತ್ತರಿಸು.

**ಟಿಪ್ಪಣಿ :** ಸಾಕ್ಷಿಯನ್ನು ವಿಂಗಡಿಸಿಕೊಂಡು ನೋಡಿದರೆ ನಾನು ಅದ್ವಿತೀಯನೇ ಎಂದು ತೋರುವದು; ಆದರೂ ಬಂಧಮೋಕ್ಷಗಳು ಸತ್ಯವೆಂಬ ಬುದ್ಧಿ ಹೋಗಲಿಲ್ಲ. ಪ್ರಪಂಚವು ಆತ್ಮನ **ವಿವರ್ತವು**, ಎಂದರೆ

---

★ [illegible] ॥

ಆತ್ಮನ ಇರವಿಗಿಂತ ಕಡಿಮೆಯ ಇರವನ್ನುಳ್ಳದ್ದಾಗಿ ಹಗ್ಗದಲ್ಲಿ ಹಾವಿನಂತೆ ಭ್ರಾಂತಿಯಿಂದ ತೋರತಕ್ಕದ್ದು, ಆದರೂ ಸತ್ಯವಾಗಿಯೇ ತೋರುತ್ತಿದೆಯಲ್ಲ !- ಎಂದು ಶಿಷ್ಯನ ಅಭಿಪ್ರಾಯ. ಇಲ್ಲಿ ಶಿಷ್ಯನು ಹೊರಕ್ಕೆ ತಂದಿರುವ ಸಂಶಯಗಳನ್ನು ಕುರಿತು **ಟೀಕೆ**ಯಲ್ಲಿ ಬರೆದಿರುವದನ್ನು ನೋಡಿರಿ.

**ಏವಂ ಶಿಷ್ಯವಚಃ ಶ್ರುತ್ವಾ ಗುರುರಾಹೋತ್ತರಂ ಸ್ಫುಟಮ್ ।**
**ನಾಜ್ಞಾನಂ ನ ಚ ಬುದ್ಧಿಶ್ಚ ನ ಜಗನ್ನ ಚ ಸಾಕ್ಷಿತಾ ॥ ೪ ॥**

೪. ಹೀಗೆಂದ ಶಿಷ್ಯನ ಮಾತನ್ನು ಕೇಳಿ ಗುರುವು ಸ್ಪಷ್ಟವಾದ ಉತ್ತರವನ್ನು ಹೇಳುತ್ತಾನೆ : ಅಜ್ಞಾನವಿಲ್ಲ, ಬುದ್ಧಿಯೂ ಇಲ್ಲ, ಜಗತ್ತೂ ಇಲ್ಲ, ಸಾಕ್ಷಿತ್ವವೆಂಬದೂ ಇಲ್ಲ.

**ಬನ್ಧಮೋಕ್ಷಾದಯಃ ಸರ್ವೇ ಕೃತಾಃ ಸತ್ಯೇಽದ್ವಯೇ ತ್ವಯಿ ।**
**ಭಾತೀತ್ಯುಕ್ತೇ ಜಗತ್ಸರ್ವಂ ಸದ್ರೂಪಂ ಬ್ರಹ್ಮ ತದ್ಭವೇತ್ ॥ ೫ ॥**

೫. ಬಂಧ, ಮೋಕ್ಷ- ಮುಂತಾದವೆಲ್ಲವೂ ಸತ್ಯವಾಗಿಯೂ ಎರಡನೆಯದಿಲ್ಲದವನಾಗಿಯೂ ಇರುವ ನಿನ್ನಲ್ಲಿ ಕಲ್ಪಿತವಾಗಿರುವವು. 'ಜಗತ್ತು ತೋರುತ್ತದೆ' ಎಂದರೆ ಅದೆಲ್ಲವೂ ಸದ್ರೂಪವಾದ ಬ್ರಹ್ಮವೇ ಆಗುವದು.

**ಟಿಪ್ಪಣಿ :** 'ವಿವೇಕಬುದ್ಧಿಯಿಂದ ಅದ್ವಿತೀಯಾತ್ಮನನ್ನು ಅರಿತಿದ್ದೇನೆ' ಎಂದು ಶಿಷ್ಯನು ಹೇಳಿದ್ದನು. ಮನಸ್ಸಿಗೆ ಸಾಕ್ಷಿಯಾದ ಆತ್ಮನು ಒಬ್ಬನೇ ಎಂದೂ ಹೇಳಿದ್ದನು. ಇದಕ್ಕೆ ಬುದ್ಧಿಯೆಂಬುದು ಆತ್ಮನಿಗಿಂತ ಬೇರೆಯಾಗಿಲ್ಲ, ಸಾಕ್ಷಿತ್ವವೂ ನಿಜವಾಗಿಲ್ಲ- ಎಂದು ಉತ್ತರವನ್ನು ಹೇಳಿದ್ದಾಗಿದೆ. ಮನಸ್ಸು, ಬುದ್ಧಿ- ಇವುಗಳು ಅಂತಃಕರಣದ ಹೆಸರುಗಳು 'ಅಜ್ಞಾನದಿಂದ ಜಗತ್ತು ಕಾಣುತ್ತಿದೆಯಲ್ಲ !' ಎಂಬ ಶಂಕೆಗೆ ಅಜ್ಞಾನವೂ ಜಗತ್ತೂ ಆತ್ಮನಿಗಿಂತ ಬೇರೆಯಾಗಿ ಸ್ವತಂತ್ರವಾಗಿಲ್ಲ- ಎಂಬ ಪರಿಹಾರವನ್ನು ಕೊಟ್ಟದ್ದಾಗಿದೆ. 'ಬಂಧಮೋಕ್ಷಾದಿವ್ಯವಹಾರಗಳು ಕಾಣುತ್ತದೆಯಲ್ಲ !'

ಎಂಬದಕ್ಕೆ 'ಅದ್ವಯನಾಗಿರುವ ನಿನ್ನಲ್ಲಿ ಬಂಧವೂ ಮೋಕ್ಷಗಳೂ ಕಲ್ಪಿತವಾಗಿವೆ' ಎಂಬ ಉತ್ತರವನ್ನು ಕೊಟ್ಟಿರುತ್ತದೆ.

ಆತ್ಮನು ಸಾಕ್ಷಿಯಾಗಿರುವದರಿಂದಲೂ ಸಾಕ್ಷ್ಯವಾದ ಅಂತಃಕರಣವೇ ಮುಂತಾದ ಅನಾತ್ಮಜಗತ್ತು ದೇಶಕಾಲಗಳಲ್ಲಿಲ್ಲವಾದ್ದರಿಂದಲೂ ಚೈತನ್ಯವಲ್ಲದಿರುವದರಿಂದಲೂ ಸಾಕ್ಷಿಯಾದ ಆತ್ಮನಿಗೆ ಎರಡನೆಯದು ಎನ್ನಿಸಿಕೊಳ್ಳುವದಕ್ಕೆ ಅದು ಅಯೋಗ್ಯವೆಂತ ಇಲ್ಲಿ ಹೇಳಿರುತ್ತದೆ. ಒಂದೇ ಜಾತಿಯ ಎರಡು ವಸ್ತುಗಳನ್ನು ಒಂದು, ಎರಡು- ಎಂದು ಎಣಿಸುವದಕ್ಕೆ ಬರುವದೆಂತಲೂ ಹಾಗೆ ಎಣಿಸುವ ಪದಾರ್ಥಗಳು ದೇಶಕಾಲಗಳಲ್ಲಿ ಇರಲೇಬೇಕೆಂತಲೂ ಮನಸ್ಸಿನಲ್ಲಿ ತಿಳಿದರೆ ಇಲ್ಲಿ ಕೇವಲ ಪ್ರತಿಜ್ಞಾಮಾತ್ರವಾಗಿ ಹೇಳಿರುವ ಅದ್ವಿತೀಯತ್ವವು ಸ್ಪಷ್ಟವಾಗುತ್ತದೆ. 'ದ್ವಿತೀಯವಸ್ತುವು ಕಾಣುತ್ತದೆ' ಎನ್ನುವದೂ ಸರಿಯಲ್ಲ, ಏಕೆಂದರೆ ಆ ಕಾಣುವಿಕೆಯೆಂಬ ಪ್ರಕಾಶವು ನಿಜವಾಗಿರುವ ಚಿತ್ಪ್ರಕಾಶಕ್ಕೇ ಸಲ್ಲತಕ್ಕದ್ದಾಗಿದೆ.

**ಸರ್ಪಾದೌ ರಜ್ಜುಸತ್ತೇವ ಬ್ರಹ್ಮಸತ್ತೈವ ಕೇವಲಮ್ ।**
**ಪ್ರಪಞ್ಚಾಧಾರರೂಪೇಣ ವರ್ತತೇ ತಜ್ಜಗನ್ನ ಹಿ ॥ ೬ ॥**

೬. ಹಾವು ಮುಂತಾದದ್ದರಲ್ಲಿ ಹಗ್ಗದ ಇರವೇ ತೋರುವಂತೆ ಬ್ರಹ್ಮದ ಇರವೇ ಪ್ರಪಂಚಕ್ಕೆ ಆಧಾರವಾಗಿರುವದು. ಆದ್ದರಿಂದ ಆ ಜಗತ್ತೆಂಬುದು[1] ನಿಜವಾಗಿಲ್ಲ.

**ಯಥೇಕ್ಷುಮಭಿಸಂವ್ಯಾಪ್ಯ ಶರ್ಕರಾ ವರ್ತತೇ ತಥಾ ।**
**ಆಶ್ಚರ್ಯಬ್ರಹ್ಮರೂಪೇಣ ತ್ವಂ ವ್ಯಾಪ್ತೋಽಸಿ ಜಗತ್ತ್ರಯಮ್ ॥ ೭ ॥**

೭. ಸಕ್ಕರೆಯು ಕಬ್ಬನ್ನು ಎಲ್ಲಾ ಕಡೆಯಲ್ಲಿಯೂ ಹೇಗೆ ವ್ಯಾಪಿಸಿಕೊಂಡಿರುವದೋ ಹಾಗೆ ಆಶ್ಚರ್ಯಕರವಾದ ಬ್ರಹ್ಮರೂಪದಿಂದ ನೀನು ಮೂರುಲೋಕವನ್ನೂ ವ್ಯಾಪಿಸಿಕೊಂಡಿರುತ್ತೀಯೆ.

1 'ಸಜ್ಜಗನ್ನ ಹಿ' ಎಂಬ ಪಾಠವೂ ಉಂಟು ; ಜಗತ್ತು ಸತ್ಯವಲ್ಲ- ಎಂದು ಅದಕ್ಕೆ ಅರ್ಥ.

**ಟಿಪ್ಪಣಿ :** ಕಬ್ಬಿನಲ್ಲೆಲ್ಲ ಸಕ್ಕರೆಯು ಕಣ್ಣಿಗೆ ಕಾಣಿಸ ವ್ಯಾಪಿಸಿಕೊಂಡಿರುವಂತೆ ಜಗತ್ತೆಲ್ಲವನ್ನೂ ಅತೀಂದ್ರಿಯವಾದ ಚೇತನರೂಪದಿಂದ ಆತ್ಮನು ವ್ಯಾಪಿಸಿಕೊಂಡಿರುತ್ತಾನೆ. ನಾವು ಶರೀರದಲ್ಲಿಯೇ ಇದ್ದೇವೆಂದು ಭಾವಿಸಿದ್ದರೂ ನಮ್ಮ ನಿಜವಾದ ಸ್ವರೂಪವು ಜಗತ್ತ್ರಯವನ್ನು ವ್ಯಾಪಿಸಿಕೊಂಡಿರುವದೆಂಬುದೇ ಇಲ್ಲಿ ಆಶ್ಚರ್ಯವು. ಕಬ್ಬಿನ ದೃಷ್ಟಾಂತವನ್ನು ಇಷ್ಟರಮಟ್ಟಿಗೆ ಉಪಯೋಗಿಸಿಕೊಳ್ಳಬೇಕೇ ಹೊರತು ಸಕ್ಕರೆಗಿಂತ ಬೇರೆಯಾಗಿ ಕಬ್ಬಿನ ಶಿಪ್ಪೆಯಿರುವಂತೆ ಆತ್ಮನಿಗಿಂತ ಬೇರೆಯಾಗಿ ಜಗತ್ತೂ ಇರುವದೆಂದು ಎಣಿಸಬಾರದು ; ಹಾಗೆ ಎಣಿಸುವದು ಹಿಂದಿನಮುಂದಿನ ಶ್ಲೋಕಗಳ ಅಭಿಪ್ರಾಯಕ್ಕೆ ವಿರುದ್ಧವಾಗುತ್ತದೆ.

**ಮರುಭೂಮೌ ಜಲಂ ಸರ್ವಂ ಮರುಭೂಮಾತ್ರಮೇವ ತತ್ ।**
**ಜಗತ್ತ್ರಯಮಿದಂ ಸರ್ವಂ ಚಿನ್ಮಾತ್ರಂ ಸುವಿಚಾರತಃ ॥ ೮ ॥**

೮. ಮರಳುಕಾಡಿನಲ್ಲಿ ತೋರುವ (ಬಿಸಿಲುಕುದುರೆಯ) ನೀರೆಲ್ಲ ಬರಿಯ ಮರುಭೂಮಿಯೇ ಆಗಿರುವಂತೆ ಈ ಮೂರು ಲೋಕವೆಲ್ಲವೂ ಚೆನ್ನಾಗಿ ವಿಚಾರಿಸಿ ನೋಡಿದರೆ ಬರಿಯ ಚೈತನ್ಯವೇ ಆಗಿರುತ್ತದೆ.

**ಬ್ರಹ್ಮಾದಿಸ್ತಮ್ಬಪರ್ಯನ್ತಾಃ ಪ್ರಾಣಿನಸ್ತ್ವಯಿ ಕಲ್ಪಿತಾಃ ।**
**ಬುದ್ಬುದಾದಿತರಙ್ಗಾನ್ತಾ ವಿಕಾರಾಃ ಸಾಗರೇ ಯಥಾ ॥ ೯ ॥**

೯. ನೀರುಗುಳ್ಳೆಯಿಂದ ಅಲೆಯವರೆಗಿನ ಮಾರ್ಪಾಡುಗಳೆಲ್ಲವೂ ಸಾಗರದಲ್ಲಿ ಹೇಗೆ ಕಲ್ಪಿತವಾಗಿರುವವೋ ಹಾಗೆ ಬ್ರಹ್ಮನಿಂದ ಹಿಡಿದು ಹುಲ್ಲುಕಡ್ಡಿಯವರೆಗಿನ ಪ್ರಾಣಿಗಳು ನಿನ್ನಲ್ಲಿ ಕಲ್ಪಿತವಾಗಿರುವವು.

**ತರಙ್ಗತ್ವಂ ಧ್ರುವಂ ಸಿನ್ಧುರ್ನ ವಾಞ್ಛತಿ ಯಥಾ ತಥಾ ।**
**ವಿಷಯಾನನ್ದವಾಞ್ಛಾ ತೇ ಮಹದಾನನ್ದರೂಪತಃ[1] ॥ ೧೦ ॥**

1. (ಇಲ್ಲಿ ಶ್ಲೋಕದ ಶಬ್ದಗಳು ಸರಿಯಾಗಿ ಅನ್ವಯಿಸುವದಿಲ್ಲ ; 'ಮಹದಾನಂದ' ಎಂಬ ಮಾತು ವ್ಯಾಕರಣದಂತೆ 'ಮಹಾನಂದ' ಎಂದಿರಬೇಕು.) ವಿಷಯಾನಂದವೂ ಬ್ರಹ್ಮಾನಂದದಲ್ಲಿ ಒಂದಂಶವಾಗಿ ಅಡಕವಾಗಿರುವದೆಂಬುದು ದೃಷ್ಟಾಂತದ ಬಲದಿಂದ ತೋರುತ್ತದೆ.

೧೦. ಕಡಲು ತಾನು ಅಲೆಯಾಗಬೇಕೆಂದು ಬಯಸುವದಿಲ್ಲವೆಂಬುದು ಹೇಗೆ ನಿಶ್ಚಯವೋ ಹಾಗೆ ಪರಮಾನಂದರೂಪನಾಗಿರುವದರಿಂದ ನಿನಗೆ ವಿಷಯಾನಂದದ ಬಯಕೆಯು ಇರುವದಿಲ್ಲ.

**ಪಿಷ್ಟಂ ವ್ಯಾಪ್ಯ ಗುಡಂ ಯದ್ವನ್ಮಾಧುರ್ಯಂ ನ ಹಿ ವಾಞ್ಛತಿ ।**
**ಪೂರ್ಣಾನನ್ದೋ ಜಗದ್ವ್ಯಾಪ್ಯ ತದಾನನ್ದಂ ನ ವಾಞ್ಛಸಿ**[1] ॥೧೧॥

೧೧. ಬೆಲ್ಲವು ಹಿಟ್ಟನ್ನು ವ್ಯಾಪಿಸಿದ್ದರೂ ಅದರ ಸಿಹಿಯನ್ನು ಹೇಗೆ ಬಯಸದಿರುವದೋ ಅದರಂತೆ ಪೂರ್ಣಾನಂದನಾದ ನೀನು ಜಗತ್ತನ್ನು ವ್ಯಾಪಿಸಿದ್ದರೂ ಅದರ ಸುಖವನ್ನು ಬಯಸದಿರುವೆ.

**ಟಿಪ್ಪಣಿ :** ದೃಷ್ಟಾಂತದಲ್ಲಿ ಹಿಟ್ಟಿನಲ್ಲಿ ಬೇರೊಂದು ಸಿಹಿ ಇರುತ್ತದೆ ; ಅದರಂತೆಯೇ ಜಗತ್ತಿನಲ್ಲಿ ವಿಷಯಾನಂದವೆಂಬುದು ನಮಗಿಂತ ಬೇರೆಯಿದ್ದಂತೆ ವ್ಯವಹಾರದಲ್ಲಿ ತೋರುತ್ತದೆ. ಈ ದೃಷ್ಟಿಯನ್ನವಲಂಬಿಸಿ ಇಲ್ಲಿ ದೃಷ್ಟಾಂತವನ್ನು ಕೊಟ್ಟಿರುತ್ತದೆ.

**ದಾರಿದ್ರ್ಯಾಶಾ ಯಥಾ ನಾಸ್ತಿ ಸಮ್ಪನ್ನಸ್ಯ ತಥಾ ತವ ।**
**ಬ್ರಹ್ಮಾನನ್ದ ನಿಮಗ್ನಸ್ಯ ವಿಷಯಾಶಾ ನ ಸಂಭವೇತ್** ॥೧೨॥

೧೨. ಹಣಗಾರನಿಗೆ ಹೇಗೆ ಬಡತನದ ಆಶೆಯಿರುವದಿಲ್ಲವೋ ಅದರಂತೆ ಬ್ರಹ್ಮಾನಂದದಲ್ಲಿ ಮುಳುಗಿರುವ ನಿನಗೆ ವಿಷಯದಾಸೆಯೆಂಬುದು ಎಂದಿಗೂ ಇಲ್ಲ.

**ವಿಷಂ ದೃಷ್ಟ್ವಾಮೃತಂ ದೃಷ್ಟ್ವಾ ವಿಷಂ ತ್ಯಜತಿ ಬುದ್ಧಿಮಾನ್ ।**
**ಆತ್ಮಾನಮಪಿ ದೃಷ್ಟ್ವಾ ತ್ವಂ ತ್ಯಜಾನಾತ್ಮಾನಮಾದರಾತ್** ॥೧೩॥

೧೩. ವಿಷವನ್ನು ನೋಡಿ ಅಮೃತವನ್ನು ನೋಡಿದ ಜಾಣನು ವಿಷವನ್ನು ಬಿಟ್ಟುಬಿಡುತ್ತಾನೆ. ಅದರಂತೆ ಆತ್ಮನನ್ನು ಕಂಡಿರುವ ನೀನು ಅನಾತ್ಮವನ್ನು ಆದರದಿಂದ ಬಿಟ್ಟುಬಿಡು.

---

1. 'ವಾಞ್ಛತಿ' (ಬಯಸದಿರುವನು) ಎಂಬ ಪಾಠಕ್ಕಿಂತ 'ವಾಞ್ಛಸಿ' ಎಂಬ ಪಾಠವೇ ಮೇಲು.

**ಟಿಪ್ಪಣಿ** : ಅಮೃತವೊಂದಿದೆಯೆಂದು ತಿಳಿದವನು ವಿಷವನ್ನು ನಿಶ್ಚಯವಾಗಿ ಬಿಟ್ಟುಬಿಡುತ್ತಾನೆ : ಅದರಂತೆ ಸಚ್ಚಿದಾನಂದರೂಪನಾದ ಆತ್ಮನು ನಮ್ಮ ಸ್ವರೂಪವೆಂದು ತಿಳಿದಮೇಲೆ ಅವನನ್ನು ಅರಿಯುವದರಲ್ಲಿ ಆದರವಿರಬೇಕೇ ಹೊರತು ಅನಾತ್ಮಚಿಂತನೆಯಲ್ಲಿ ಆದರವನ್ನು ತೋರಿಸಬಾರದು.

**ಘಟಾವಭಾಸಕೋ ಭಾನುರ್ಘಟನಾಶೇ ನ ನಶ್ಯತಿ ।**
**ದೇಹಾವಭಾಸಕಃ ಸಾಕ್ಷೀ ದೇಹನಾಶೇ ನ ನಶ್ಯತಿ ॥೧೪॥**

೧೪. ಗಡಿಗೆಯನ್ನು ಬೆಳಗುವ ಸೂರ್ಯನು ಗಡಿಗೆಯು ಒಡೆದುಹೋದರೆ ತಾನೂ ನಾಶವಾಗುವದಿಲ್ಲವಷ್ಟೆ ; ಅದರಂತೆ ದೇಹವನ್ನು ಬೆಳಗುವ ಸಾಕ್ಷಿಯು ದೇಹವು ನಾಶವಾದಮಾತ್ರಕ್ಕೆ ತಾನೂ ನಾಶವಾಗುವದಿಲ್ಲ.

**ನಿರಾಕಾರಂ ಜಗತ್ಸರ್ವಂ ನಿರ್ಮಲಂ ಸಚ್ಚಿದಾತ್ಮಕಮ್ ।**
**ದ್ವೈತಾಭಾವಾತ್ ಕಥಂ ಕಸ್ಮಾದ್ಭಯಂ ಪೂರ್ಣಸ್ಯ ತೇ[1] ವದ ॥೧೫॥**

೧೫. ಜಗತ್ತೆಲ್ಲವೂ ಆಕಾರವಿಲ್ಲದ್ದು, ನಿರ್ಮಲವಾದದ್ದು, ಸಚ್ಚಿದ್ರೂಪವಾದದ್ದು. ಹೀಗೆ ದ್ವೈತವೇ ಇಲ್ಲದಿರುವದರಿಂದ ನಿನಗೆ ಹೇಗೆ ಏತರಿಂದ ಅಂಜಿಕೆ ? ಹೇಳು.

**ಟಿಪ್ಪಣಿ** : ಈ ಜಗತ್ತೆಲ್ಲವೂ ಬ್ರಹ್ಮವೇ, ಬ್ರಹ್ಮಕ್ಕಿಂತ ಜಗತ್ತು ಬೇರೆಯಿಲ್ಲ- ಎಂಬುದನ್ನು ತಿಳಿದರೆ ತನಗಿಂತ ಬೇರೆಯಾದ ವಸ್ತುವೇ ಇಲ್ಲದ್ದರಿಂದ ಎರಡನೆಯ ವಸ್ತುವಿನಿಂದ ಆಗಬಹುದಾದ ಅಂಜಿಕೆಯೂ ಇರುವದಿಲ್ಲ. ಛಾಂದೋಗ್ಯ ೩-೧೪-೧, ತೈತ್ತಿರೀಯ ೨-೯-ಮುಂತಾದ ಶ್ರುತಿಗಳ ಸೂಚನೆ ಇಲ್ಲಿದೆ.

**ಬ್ರಹ್ಮಾದಿಕಂ ಜಗತ್ಸರ್ವಂ ತ್ವಯ್ಯಾನನ್ದೇ ಪ್ರಕಲ್ಪಿತಮ್ ।**
**ತ್ವಯ್ಯೇವ ಲೀನಂ[2] ಜಗತ್ತ್ವಂ ಕಥಂ ಲೀಯಸೇ ವದ ॥೧೬॥**

1 'ಮೇ' (ನನಗೆ) ಎಂಬ ಪಾಠಕ್ಕಿಂತ ಇದೇ ಮೇಲು. 2. ಛಂದಸ್ಸು ಸರಿಯಾಗುವದಕ್ಕೆ 'ತ್ವಯ್ಯೇವ ಲೀಯತೇ ಚ ತ್ವಂ' ಎಂದಿರಬೇಕಾಗುವದು.

೧೬. ಬ್ರಹ್ಮನೇ ಮೊದಲಾದ ಜಗತ್ತೆಲ್ಲವೂ ಆನಂದರೂಪನಾದ ನಿನ್ನಲ್ಲಿ ಕಲ್ಪಿತವಾಗಿರುವದು. ಜಗತ್ತು ನಿನ್ನಲ್ಲಿಯೇ ಲಯವಾಗಿರುವದು, ಹೀಗಿರುವಲ್ಲಿ ನೀನು ಹೇಗೆ ಲಯವಾದೀಯೆ ? ಹೇಳು.

**ನ ಹಿ ಪ್ರಪಞ್ಚೋ ನ ಹಿ ಭೂತಜಾತಂ ।**
**ನ ಚೇನ್ದ್ರಿಯಂ ಪ್ರಾಣಗಣೋ ನ ದೇಹಃ ।**
**ನ ಬುದ್ಧಿಚಿತ್ತೇ ನ ಮನೋ ನ ಕರ್ತಾ**
**ಬ್ರಹ್ಮೈವ ಸತ್ಯಂ ಪರಮಾತ್ಮರೂಪಮ್** ॥ ೧೭ ॥

೧೭. ಪ್ರಪಂಚವಿಲ್ಲವೇ ಇಲ್ಲ ; ಭೂತಸಮೂಹವು ಇಲ್ಲವೇ ಇಲ್ಲ; ಇಂದ್ರಿಯವೂ ಇಲ್ಲ, ಪ್ರಾಣಸಮುದಾಯವೂ ಇಲ್ಲ, ದೇಹವೂ ಇಲ್ಲ, ಬುದ್ಧಿಚಿತ್ತಗಳಿಲ್ಲ, ಮನಸ್ಸಿಲ್ಲ, ಕರ್ತೃವಿಲ್ಲ. ಪರಮಾತ್ಮರೂಪವಾದ ಬ್ರಹ್ಮವೇ ಸತ್ಯವು.

**ಸರ್ವಂ ಸುಖಂ ವಿದ್ಧಿ ಸದುಃಖನಾಶಾತ್**[1]
**ಸರ್ವಂ ಚ ಸದ್ರೂಪಮಸತ್ಯನಾಶಾತ್ ।**
**ಚಿದ್ರೂಪಮೇವ ಪ್ರತಿಭಾನಯುಕ್ತಂ**
**ತಸ್ಮಾದಖಣ್ಡಂ ಪರಮಾತ್ಮರೂಪಮ್** ॥ ೧೮ ॥

೧೮. ದುಃಖದಿಂದ ಕೂಡಿರುವದು ಯಾವದೂ ಕಾಣದಿರುವದರಿಂದ ಎಲ್ಲವೂ ಆನಂದವೆಂದು ತಿಳಿ. ಅಸತ್ಯವಾದದ್ದು ಕಾಣದೆ ಇರುವದರಿಂದ ಎಲ್ಲವೂ ಸದ್ರೂಪವೆಂದು ತಿಳಿ. ತೋರಿಕೆಯಿಂದೊಡಗೂಡಿರುವದರಿಂದ ಎಲ್ಲವೂ ಚಿದ್ರೂಪವೇ ಎಂದು ತಿಳಿ. ಆದ್ದರಿಂದ ಪರಮಾತ್ಮರೂಪವು ಅಖಂಡವಾಗಿರುತ್ತದೆ.

**ಟಿಪ್ಪಣಿ :** ಯಾವದು ನಮಗೆ ಅಪ್ರಿಯವಾಗಿರುವದೋ ಅದೇ ದುಃಖದಿಂದ ಕೂಡಿರುವದು ; ಒಂದು ವಸ್ತುವು ಈಗ ಸುಖಕರವಾಗಿದ್ದರೂ ಕಾಲಾಂತರಕೆ, ಅದೇ ದುಃಖಕರವಾಗಿರುವದು. ಒಬ್ಬನಿಗೆ

1 'ಸುದುಃಖನಾಶಾತ್' (ಹೆಚ್ಚಿನ ದುಃಖವು ಕಾಣದಿರುವದರಿಂದ) ಎಂಬ ಪಾಠಕ್ಕಿಂತ ಇದೇ ಮೇಲು.

ಸುಖಕರವಾಗಿದ್ದರೂ ಮತ್ತೊಬ್ಬನಿಗೆ ದುಃಖಕರವಾಗಿರುವದು. ಆದ್ದರಿಂದ ವಸ್ತುವು ಸುಖಕರವೆಂದು ಆರೋಪಿಸುವದು ನಮ್ಮ ಪ್ರಿಯಸುಖ ಸ್ವರೂಪದಿಂದಲೇ. ಹೀಗೆಯೇ ನಾವು ಸತ್ಯಸ್ವರೂಪರಾಗಿರುವದರಿಂದಲೇ ಎಲ್ಲವನ್ನೂ ಸತ್ಯವೆಂದು ಭಾವಿಸುತ್ತಿರುವೆವು, ಚಿದ್ರೂಪರಾಗಿರುವದ ರಿಂದಲೇ ಎಲ್ಲವನ್ನೂ ಚಿದ್ರೂಪವೆಂದು ಎಂದರೆ ಅದು ತೋರುತ್ತಿದೆ ಯೆಂದು ಭಾವಿಸುತ್ತಿರುವೆವು. ಹೀಗೆ ನಮ್ಮ ಆತ್ಮಸ್ವರೂಪದಲ್ಲಿರುವ ಸಚ್ಚಿದಾನಂದಸ್ವರೂಪವನ್ನೇ ಅನಾತ್ಮದಲ್ಲಿ ಆರೋಪಿಸುತ್ತಿರುವದರಿಂದಲೂ ಅನಾತ್ಮವು ಹಿಂದೆ ತಿಳಿಸಿರುವಂತೆ ನಿಜವಾಗಿ ಆತ್ಮನಿಗಿಂತ ಬೇರೆಯಾಗಿ ಇಲ್ಲವೇ ಇಲ್ಲವಾದ್ದರಿಂದಲೂ ಎಲ್ಲವೂ ಪರಮಾರ್ಥದೃಷ್ಟಿಯಿಂದ ಅಖಂಡ ಸಚ್ಚಿದಾನಂದಸ್ವರೂಪನಾದ ಆತ್ಮನೇ ಎಂದು ಏರ್ಪಡುತ್ತದೆ.

**ಚಿದೇವ ದೇಹಸ್ತು ಚಿದೇವ ಲೋಕಾ-**
**ಶ್ಚಿದೇವ ಭೂತಾನಿ ಚಿದಿನ್ದ್ರಿಯಾಣಿ ।**
**ಕರ್ತಾ ಚಿದನ್ತಃಕರಣಂ ಚಿದೇವ**
**ಚಿದೇವ ಸತ್ಯಂ ಪರಮಾರ್ಥರೂಪಮ್ ॥ ೧೯**

೧೯. ದೇಹವು ಚೈತನ್ಯವೇ, ಲೋಕಗಳು ಚೈತನ್ಯವೇ, ಭೂತಗಳು ಚೈತನ್ಯವೇ, ಇಂದ್ರಿಯಗಳು ಚೈತನ್ಯವೇ, ಕರ್ತೃವು ಚೈತನ್ಯವೇ, ಅಂತಃಕರಣವು ಚೈತನ್ಯವೇ. ಚೈತನ್ಯವೇ ಪರಮಾರ್ಥಸತ್ಯವಾದದ್ದು.

**ನ ಮೇ ಬನ್ಧೋ ನ ಮೇ ಮುಕ್ತಿರ್ನ ಮೇ ಶಾಸ್ತ್ರಂ ನ ಮೇ ಗುರುಃ ।**
**ಮಾಯಾಮಾತ್ರವಿಲಾಸೋ ಹಿ ಮಾಯಾತೀತೋಽಹಮದ್ವಯಃ ॥ ೨೦ ॥**

೨೦. ನನಗೆ ಬಂಧವಿಲ್ಲ, ನನಗೆ ಮೋಕ್ಷವಿಲ್ಲ, ನನಗ ಶಾಸ್ತ್ರವಿಲ್ಲ, ನನಗೆ ಗುರುವಿಲ್ಲ. ಏಕೆಂದರೆ ಇದೆಲ್ಲ ಬರಿಯ ಮಾಯೆಯ ವಿಲಾಸವು, ನಾನು ಮಾಯಾತೀತನಾಗಿ ಅದ್ವಿತೀಯನಾಗಿರುತ್ತೇನೆ.

**ಟಿಪ್ಪಣಿ** : ಇದುವರೆಗೆ ಶಿಷ್ಯನಿಗೆ ಉಪದೇಶಮಾಡಿದಂತೆ ಇದ್ದ ವಾಕ್ಯಗಳಿದ್ದವು. ಇಲ್ಲಿಂದ ಮುಂದಕ್ಕೆ ಜ್ಞಾನಿಯ ಅನುಭವವನ್ನು ತಿಳಿಸುವ ವಾಕ್ಯಗಳು ಕಂಡುಬರುತ್ತವೆ. ನಮಗೆ ಬಂಧವಾಗಿರುವದೆಂದು ವ್ಯವಹಾರ

ದಲ್ಲಿ ನಾವು ಭಾವಿಸಿರುವದನ್ನೇ ಇಟ್ಟುಕೊಂಡು ಆ ದೃಷ್ಟಿಯಿಂದಲೇ ಮೋಕ್ಷಕ್ಕೆ ಉಪಾಯವನ್ನು ಶಾಸ್ತ್ರವು ತಿಳಿಸುತ್ತದೆ. ಜ್ಞಾನವುಂಟಾದಮೇಲೆ 'ನನಗೆ ಯಾವಾಗಲೂ ಬಂಧವೇ ಆಗಿರಲಿಲ್ಲ. ನಾನು ಅದ್ವಿತೀಯಬ್ರಹ್ಮವೇ ಆಗಿರುತ್ತೇನೆ' ಎಂಬ ಅರಿವು ಉಂಟಾಗುವದು. ಆ ಪರಮಾರ್ಥದೃಷ್ಟಿಯಿಂದ ಬಂಧಮೋಕ್ಷಾದಿಗಳಿಲ್ಲ. ಮಾಂಡೂಕ್ಯಕಾರಿಕಾ ೨-೩೨ ರ ಸೂಚನೆಯಿದು.

**ರಾಜ್ಯಂ ಕರೋತು ವಿಜ್ಞಾನೀ ಭಿಕ್ಷಾಮಟತು ನಿರ್ಭಯಃ।**
**ದೋಷೈರ್ನ ಲಿಪ್ಯತೇ ಶುದ್ಧಃ ಪದ್ಮಪತ್ರಮಿವಾಮ್ಬಸಾ ॥ ೨೧ ॥**

೨೧. ಜ್ಞಾನಿಯಾದವನು ರಾಜ್ಯವನ್ನಾಳುತ್ತಿರಲಿ, ಯಾವದೊಂದರ ಅಂಜಿಕೆಯೂ ಇಲ್ಲದೆ ಭಿಕ್ಷಾಟನೆಯನ್ನು ಮಾಡುತ್ತಿರಲಿ, ತಾವರೆಯೆಲೆಯು ನೀರಿನ ಅಂಟಿಲ್ಲದೆ ಇರುವಂತೆ ಶುದ್ಧನಾದ ಅವನು ಯಾವ ದೋಷಗಳಿಂದಲೂ ಲಿಪ್ತನಾಗಿರುವದಿಲ್ಲ.

**ಟಿಪ್ಪಣಿ :** ವ್ಯವಹಾರದೃಷ್ಟಿಯಿಂದ ಪ್ರಾರಬ್ಧವಶನಾಗಿ ಅನುಭವಿಸುವ ಭೋಗಗಳ ಅಂಟು ಪರಮಾರ್ಥವಾಗಿ ಜ್ಞಾನಿಗೆ ತಗಲುವದೇ ಇಲ್ಲ. **ಪಂಚದಶಿ-ತೃಪ್ತಿದೀಪದ** ೧೩೦, ೨೮೯ - ಈ ಶ್ಲೋಕಗಳನ್ನು ನೋಡಿರಿ.

**ಪುಣ್ಯಾನಿ ಪಾಪಕರ್ಮಾಣಿ ಸ್ವಪ್ನಗಾನಿ ನ ಜಾಗ್ರತಿ ।**
**ಏವಂ ಜಾಗ್ರತ್ಪುಣ್ಯಪಾಪಕರ್ಮಾಣಿ ಚ ನಮೇ ಪ್ರಭೋಃ ॥ ೨೨ ॥**

೨೨. ಕನಸಿನ ಪುಣ್ಯಕರ್ಮಗಳಾಗಲಿ ಪಾಪಕರ್ಮಗಳಾಗಲಿ ಎಚ್ಚರದಲ್ಲಿ ಹೇಗೆ ಗಂಟುಬೀಳಲಾರವೋ ಇದರಂತೆ ಎಚ್ಚರದ ಪುಣ್ಯಪಾಪಕರ್ಮಗಳೂ ಜ್ಞಾನದಿಂದ ಪರಮೇಶ್ವರಸ್ವರೂಪನಾದ ನನಗೆ ಅಂಟುವ ಹಾಗಿಲ್ಲ.

**ಟಿಪ್ಪಣಿ :** 'ಪ್ರಭೋಃ' ಎಂಬುದರ ಬದಲು 'ವಿಭೋಃ' ಎಂದಿದ್ದರೆ ವ್ಯಾಪಕನಾದ ಎಂದರ್ಥವಾಗುವದು ; ಯಾವದೊಂದು ಅವಸ್ಥೆಗೂ ಕಟ್ಟುಬೀಳದ ನನಗೆ ಎಚ್ಚರದ ಅವಸ್ಥೆಯಲ್ಲಿ ಮಾತ್ರ ತೋರಬಲ್ಲ ಪುಣ್ಯಪಾಪ ಕರ್ಮಗಳ ಫಲವು ಹೇಗೆ ಅಂಟೀತು ?- ಎಂದು ಭಾವ.

**ಕಾಯಃ ಕರೋತು ಕರ್ಮಾಣಿ ವೃಥಾ ವಾಗುಚ್ಯತಾಮಿಹ ।**
**ರಾಜ್ಯಂ ಧ್ಯಾಯತು ವಾ ಬುದ್ಧಿಃ ಪೂರ್ಣಸ್ಯ ಮಮ ಕಾ ಕ್ಷತಿಃ ॥ ೨೩ ॥**

೨೩. ಶರೀರವು ಕೆಲಸಗಳನ್ನು ಮಾಡುತ್ತಿರಲಿ ; ಮಾತು ಸುಮ್ಮನೆ ಗಳಹಲ್ಪಡುತ್ತಿರಲಿ ; ಬುದ್ಧಿಯು ರಾಜ್ಯವನ್ನು ಚಿಂತಿಸಿಕೊಳ್ಳುತ್ತಿರಲಿ. ಪೂರ್ಣನಾದ ನನಗೆ ಇದರಿಂದ ಹಾನಿಯೇನು ?

**ಟಿಪ್ಪಣಿ :** ಪಂಚದಶಿಯ **ತೃಪ್ತಿದೀಪದ** ೬೯ನೆಯ ಶ್ಲೋಕವನ್ನು ಇದಕ್ಕೆ ಹೋಲಿಸಿರಿ.

**ಪ್ರಾಣಾಶ್ಚರನ್ತು ತದ್ಧರ್ಮೈಃ ಕಾಮೈರ್ವಾ ಹನ್ಯತಾಂ ಮನಃ ।**
**ಆನನ್ದಾಮೃತಪೂರ್ಣಸ್ಯ ಮಮ ದುಃಖಂ ಕಥಂ ಭವೇತ್ ॥ ೨೪ ॥**

೨೪. ಪ್ರಾಣಗಳು ತಮ್ಮ ಧರ್ಮಗಳನ್ನು ಅನುಸರಿಸುತ್ತಿರಲಿ ; ಮನಸ್ಸು ಕಾಮಗಳ ಉಪಟಳಕ್ಕೊಳಗಾಗಲಿ. ಆನಂದಾಮೃತಪೂರ್ಣನಾಗಿರುವ ನನಗೆ ದುಃಖವು ಹೇಗಾದೀತು ?

**ಟಿಪ್ಪಣಿ :** ಪ್ರಾಣದ ಧರ್ಮವಾದ ಹಸಿವುಬಾಯಾರಿಕೆಗಳು ಆತ್ಮರೂಪನಾದ ಜ್ಞಾನಿಗಿಲ್ಲ. ಜ್ಞಾನಿಯ ಮನಸ್ಸು ಕಾಮಗಳ ಹೊಡೆತಕ್ಕೆ ಸಿಕ್ಕಿರುವದೆಂದು ಅರ್ಥಮಾಡಬಾರದು ; ಮನಸ್ಸಿನಲ್ಲಿ ವ್ಯವಹಾರ ದೃಷ್ಟಿಯಿಂದ ತೋರುವ ಧರ್ಮಗಳನ್ನು ಜ್ಞಾನಿಯು ಎಂದಿಗೂ ತನ್ನ ಸ್ವರೂಪದಲ್ಲಿ ಆರೋಪಿಸಿಕೊಳ್ಳುವದಿಲ್ಲವೆಂಬುದೇ ಅಭಿಪ್ರಾಯ.

**ಆನನ್ದಾಮ್ಬುಧಿಮಗ್ನೋಽಸೌ ದೇಹೀ ತತ್ರ ನ ದೃಶ್ಯತೇ ।**
**ಲವಣಂ ಜಲಮಧ್ಯಸ್ಥಂ ಯಥಾ ತತ್ರ ಲಯಂ ಗತಮ್ ॥ ೨೫ ॥**

೨೫. ಆನಂದದ ಕಡಲಿನಲ್ಲಿ ಮುಳುಗಿರುವ ಈ ದೇಹಿಯು ನೀರಿನೊಳಗೆ ಬಿದ್ದು ಅದರಲ್ಲಿ ಕರಗಿರುವ ಉಪ್ಪಿನಂತೆ ಅದರಲ್ಲಿ ಕಾಣದೆ ಇರುವನು.

**ಇನ್ದ್ರಿಯಾಣಿ ಮನಃ ಪ್ರಾಣಾ ಅಹಂಕಾರಃ ಪರಸ್ಪರಮ್ ।**
**ಜಾಡ್ಯಸಙ್ಗತಿಮುತ್ಸೃಜ್ಯ ಮಗ್ನಾ ಮಯಿ ಚಿದರ್ಣವೇ ॥ ೨೬ ॥**

೨೬. ಇಂದ್ರಿಯಗಳು, ಮನಸ್ಸು, ಪ್ರಾಣಗಳು, ಅಹಂಕಾರ- ಇವು ಒಂದಕ್ಕೊಂದಕ್ಕಿರುವ ಜಡತ್ವಸಂಬಂಧವನ್ನು ಬಿಟ್ಟು ಚೈತನ್ಯದ ಕಡಲಾದ ನನ್ನಲ್ಲಿ ಮುಳುಗಿಬಿಟ್ಟಿವೆ.

**ಟಿಪ್ಪಣಿ :** ಛಾಂದೋಗ್ಯ ೭-೧೩-೧, ಬೃಹದಾರಣ್ಯಕ ೪-೫-೧೩- ಇವುಗಳ ಸೂಚನೆ.

**ಆತ್ಮಾನಮಞ್ಜಸಾ ವೇದ್ಮಿ ತ್ವಜ್ಞಾನಂ ಪ್ರಪಲಾಯಿತಮ್ ।**
**ಕರ್ತೃತ್ವಮದ್ಯ ಮೇ ನಷ್ಟಂ ಕರ್ತವ್ಯಂ ವಾಪಿ ನ ಕ್ವಚಿತ್ ॥ ೨೭ ॥**

೨೭. ಆತ್ಮನನ್ನು ಚೆನ್ನಾಗಿ ತಿಳಿದುಕೊಂಡಿರುತ್ತೇನೆ ; ಅಜ್ಞಾನವು ಓಡಿಹೋಯಿತು ; ಇಂದು ನನ್ನ ಕರ್ತೃತ್ವವು ಹೋಯಿತು ; ನಾನು ಮಾಡಬೇಕಾದದ್ದು ಎಲ್ಲಿಯೂ ಇರುವದೇ ಇಲ್ಲ.

**ಚಿದಮೃತಸುಖರಾಶೌ ಚಿತ್ತಫೇನಂ ವಿಲೀನಂ**
**ಕ್ಷಯಮಧಿಗತ ಏವ ವೃತ್ತಿಚಞ್ಚತ್ತರಙ್ಗಃ ।**
**ಸ್ತಿಮಿತಸುಖಸಮುದ್ರೋ ನಿರ್ವಿಚೇಷ್ಟಃ ಸುಪೂರ್ಣಃ**
**ಕಥಮಿಹ ಮಮ ದುಃಖಂ ಸರ್ವದೈಕೋಽಹಮಸ್ಮಿ ॥ ೨೮ ॥**

೨೮. ಚೈತನ್ಯವೆಂಬ ಅಮೃತದ ಆನಂದರಾಶಿಯಲ್ಲಿ ಚಿತ್ತವೆಂಬ ನೊರೆಯು ಅಡಗಿತು. ವೃತ್ತಿಯೆಂಬ ಮೇಲ್ಹರಿಯುವ ಅಲೆಯು ನಾಶವೇ ಆಯಿತು. ನಾನು ಅಲುಗಾಡದಿರುವ ಆನಂದದ ಸಾಗರನು, ಯಾವ ವ್ಯಾಪಾರವೂ ಇಲ್ಲದವನು, ಸಂಪೂರ್ಣನು. ನನಗೆ ಇಲ್ಲಿ ದುಃಖವು ಹೇಗಾದೀತು ? ನಾನು ಯಾವಾಗಲೂ ಅದ್ವಿತೀಯನಾಗಿರುವೆನು.

**ಆನನ್ದರೂಪೋಽಹಮಖಣ್ಡಬೋಧಃ**
**ಪರಾತ್ಪರೋಽಹಂ ಘನಚಿತ್ಪ್ರಕಾಶಃ ।**
**ಮೇಘಾ ಯಥಾ ವ್ಯೋಮ ನ ಚ ಸ್ಪೃಶನ್ತಿ**
**ಸಂಸಾರದುಃಖಾನಿ ನ ಮಾಂ ಸ್ಪೃಶನ್ತಿ ॥ ೨೯ ॥**

೨೯. ನಾನು ಆನಂದರೂಪನಾಗಿರುವೆನು, ಅಖಂಡಚಿತ್ಸ್ವರೂಪನಾಗಿರುವೆನು, ಎಲ್ಲಕ್ಕೂ ಹೆಚ್ಚಿನ ಹಿರಣ್ಯಗರ್ಭನಿಗಿಂತಲೂ ಹೆಚ್ಚಿನವನಾಗಿರುವೆನು, ಚೈತನ್ಯದ ಗಟ್ಟಿಯ ಬೆಳಕಾಗಿರುವೆನು. ಮೋಡಗಳು ಹೇಗೆ ಆಕಾಶವನ್ನು ಸೋಂಕಲಾರವೋ ಹಾಗೆ ಸಂಸಾರದುಃಖಗಳು ನನ್ನನ್ನು ಸೋಂಕಲಾರವು.

**ಅಸ್ಥಿಮಾಂಸಪುರೀಷಾನ್ತ್ರ ಚರ್ಮಲೋಮಸಮನ್ವಿತಃ ।**
**ಅನ್ನಾದಃ ಸ್ಥೂಲದೇಹಃ ಸ್ಯಾದತೋಽಹಂ ಶುದ್ಧಚಿದ್ಘನಃ ॥ ೩೦ ॥**

೩೦. ಎಲುಬು, ಮಾಂಸ, ಮಲ, ಕರುಳು, ಚರ್ಮ, ಕೂದಲು- ಇವುಗಳಿಂದ ಕೂಡಿ ಅನ್ನವನ್ನುಂಡು ಜೀವಿಸುತ್ತಿರುವದು **ಸ್ಥೂಲದೇಹ**ವಾಗಿರುವದು. ನಾನು ಅದಕ್ಕಿಂತ ಬೇರೆಯಾದ ಶುದ್ಧಚೈತನ್ಯದ ಗಟ್ಟಿಯು.

**ಸ್ಥೂಲದೇಹಾಶ್ರಿತಾ ಏತೇ ಸ್ಥೂಲಾದ್ಭಿನ್ನಸ್ಯ ಮೇ ನ ಹಿ ।**
**ಲಿಙ್ಗಂ ಜಡಾತ್ಮಕಂ ನಾಹಂ ಚಿತ್ಸ್ವರೂಪೋಽಹಮದ್ವಯಃ ॥ ೩೧ ॥**

೩೧. ಸ್ಥೂಲದೇಹವನ್ನು ಹೊಂದಿರುವ ಈ ಎಲುಬು ಮುಂತಾದವುಗಳು ಸ್ಥೂಲದೇಹಕ್ಕಿಂತ ಬೇರೆಯಾಗಿರುವ ನನಗೆ ಇಲ್ಲವೇ ಇಲ್ಲ. ಜಡಸ್ವರೂಪವಾದ **ಲಿಂಗವೂ** ನಾನಲ್ಲ. ಚೈತನ್ಯರೂಪನಾದ ಅದ್ವಿತೀಯನೇ ನಾನು.

**ಟಿಪ್ಪಣಿ** : ಲಿಂಗವೆಂದರೆ ಸೂಕ್ಷ್ಮಶರೀರವು. ಇದರಲ್ಲಿ ಪ್ರಾಣ, ಮನಸ್ಸು, ಇಂದ್ರಿಯಗಳು- ಎಲ್ಲವೂ ಸೇರಿವೆ.

**ಕ್ಷುತ್ಪಿಪಾಸಾನ್ಧ್ಯಬಾಧಿರ್ಯಕಾಮಕ್ರೋಧಾದಯೋಽಖಿಲಾಃ।**
**ಲಿಙ್ಗದೇಹಾಶ್ರಿತಾ ಹ್ಯೇತೇ ನೈವಾಲಿಙ್ಗಸ್ಯ ಮೇ ವಿಭೋಃ ॥ ೩೨ ॥**

೩೨. ಹಸಿವು, ನೀರಡಿಕೆ, ಕುರುಡು, ಕಿವುಡು, ಕಾಮ, ಕ್ರೋಧ- ಮುಂತಾದವುಗಳೆಲ್ಲ ಲಿಂಗದೇಹವನ್ನಾಶ್ರಯಿಸಿರುವವು. ಲಿಂಗದೇಹವಿಲ್ಲದ ವಿಭುವಾದ ನನಗೆ ಇವು ಇಲ್ಲವೇ ಇಲ್ಲ.

**ಟಿಪ್ಪಣಿ :** ಲಿಂಗದೇಹವನ್ನೂ ತನ್ನ ಚೈತನ್ಯದಿಂದ ಬೆಳಗುತ್ತಿರುವದರಿಂದ ಆತ್ಮನಿಗೆ ಲಿಂಗದೇಹವಿಲ್ಲ ; ಲಿಂಗದೇಹವು ಕೆಲಸಮಾಡದೆ ಇರುವ ಅದನ್ನೂ ಮೀರಿರುವ ಸುಷುಪ್ತಿಯಲ್ಲಿಯೂ ಆತ್ಮನಿರುವದರಿಂದ ಅವನು ವಿಭುವೂ ಎಂದರೆ ಹೆಚ್ಚು ವ್ಯಾಪಕನೂ ಆಗಿರುತ್ತಾನೆ.

**ಅನಾದ್ಯಜ್ಞಾನಮೇವಾತ್ರ ಕಾರಣಂ ದೇಹ ಉಚ್ಯತೇ ।**
**ನಾಹಂ ಕಾರಣದೇಹೋಽಪಿ ಸ್ವಪ್ರಕಾಶೋ ನಿರಞ್ಜನಃ ॥ ೩೩॥**

೩೩. ಅನಾದಿಯಾದ ಅಜ್ಞಾನವೇ **ಕಾರಣದೇಹ**ವೆನಿಸುವದು. ನಾನು ಕಾರಣದೇಹವೂ ಅಲ್ಲ. ಸ್ವಪ್ರಕಾಶನು, ಏತರ ಅಂಟೂ ಇಲ್ಲದವನು.

**ಟಿಪ್ಪಣಿ :** ಸುಷುಪ್ತಿಯಲ್ಲಿ ಅಜ್ಞಾನವಿರುವದೆಂಬುದು ಎಚ್ಚರದ ದೃಷ್ಟಿ. ಅಜ್ಞಾನವನ್ನೂ ಬೆಳಗುತ್ತಿರುವ ಚೈತನ್ಯವಾದ್ದರಿಂದ ಆತ್ಮನಿಗೆ ಅಜ್ಞಾನದ ಅಂಟಿಲ್ಲ.

**ಜಡತ್ವಪ್ರಿಯಮೋದತ್ವಧರ್ಮಾಃ ಕಾರಣದೇಹಗಾಃ ।**
**ನ ಸನ್ತಿ ಮಮ ನಿತ್ಯಸ್ಯ ನಿರ್ವಿಕಾರಸ್ವರೂಪಿಣಃ ॥ ೩೪॥**

೩೪. ಜಡವಾಗಿರುವದು, ಪ್ರಿಯಮೋದಗಳಿರುವದು- ಈ ಧರ್ಮಗಳು ಕಾರಣದೇಹದಲ್ಲಿರುವವು. ನಿತ್ಯನಾಗಿಯೂ ಯಾವ ಮಾರ್ಪಾಡುಗಳೂ ಇಲ್ಲದವನಾಗಿಯೂ ಇರುವ ನನಗೆ ಅವು ಇರುವದಿಲ್ಲ.

**ಟಿಪ್ಪಣಿ :** ಇಲ್ಲಿ ಹೇಳಿರುವಂತೆ ಆನಂದಮಯಕೋಶದ ಧರ್ಮಗಳಾದ ಪ್ರಿಯ, ಮೋದ- ಮುಂತಾದವುಗಳು ಕಾರಣಶರೀರವಾದ ಅಜ್ಞಾನದಲ್ಲಿರುವವೆಂಬುದು ಭಾಷ್ಯಗ್ರಂಥಗಳಲ್ಲಿ ಕಂಡುಬರುವದಿಲ್ಲ. ಈಚಿನ ಪ್ರಕರಣಗಳಲ್ಲಿದೆ.

**ಜೀವಾದ್ಭಿನ್ನಃ ಪರೇಶೋಽಸ್ತಿ ಪರೇಶತ್ವಂ ಕುತಸ್ತವ ।**
**ಇತ್ಯಜ್ಞ ಜನಸಂವಾದವಿಚಾರಃ[1] ಕ್ರಿಯತೇಽಧುನಾ ॥ ೩೫ ॥**

---

1 'ಇತ್ಯಜ್ಞಜನಸಂವಾದೋ' ಎಂದೇ ಮುದ್ರಿತಪುಸ್ತಕಗಳಲ್ಲಿದೆ ಅದಕ್ಕಿಂತ ನಾವು ಇಟ್ಟುಕೊಂಡಿರುವ ಪಾಠವು ಹೆಚ್ಚು ವ್ಯಾಕರಣಬದ್ಧವಾಗಿರುತ್ತದೆ.

ಜೀವನಿಗಿಂತ ಬೇರೆಯಾಗಿ ಪರಮೇಶ್ವರನಿದ್ದಾನೆ. ನಿನ್ನಲ್ಲಿ ಪರಮೇಶ್ವರತ್ವವು ಎಲ್ಲಿಂದ ಬಂದೀತು ?- ಎಂಬ ಅಜ್ಞರ ವಾದದ ವಿಷಯವಾಗಿ ಈಗ ವಿಚಾರಮಾಡಲಾಗುವದು.

**ಅಧಿಷ್ಠಾನಂ ಚಿದಾಭಾಸೋ ಬುದ್ಧಿರೇತತ್ತ್ರಯಂ ಯದಾ ।**
**ಅಜ್ಞಾನಾದೇಕವದ್ಭಾತಿ ಜೀವ ಇತ್ಯುಚ್ಯತೇ ತದಾ ॥ ೩೬ ॥**

೩೬. ಅಧಿಷ್ಠಾನವಾಗಿರುವ ಚೈತನ್ಯ, ಚಿದಾಭಾಸ, ಅಂತಃಕರಣ- ಈ ಮೂರೂ ಅಜ್ಞಾನದಿಂದ ಒಂದಾಗಿ ಯಾವಾಗ ಕಾಣುವದೋ ಆಗ ಅದು **ಜೀವ**ನೆನಿಸುವದು.

**ಅಧಿಷ್ಠಾನಂ ನ ಜೀವಃ ಸ್ಯಾತ್ ಪ್ರತ್ಯೇಕಂ ನಿರ್ವಿಕಾರತಃ ।**
**ಅವಸ್ತುತ್ವಾಚ್ಚಿದಾಭಾಸೋ ನಾಸ್ತಿ ತಸ್ಯ ಚ ಜೀವತಾ ॥ ೩೭ ॥**
**ಪ್ರತ್ಯೇಕಂ ಜೀವತಾ ನಾಸ್ತಿ ಬುದ್ಧೇರಪಿ ಜಡತ್ವತಃ ।**
**ಜೀವ ಆಭಾಸಕೂಟಸ್ಥಬುದ್ಧಿತ್ರಯಮತೋ ಭವೇತ್ ॥ ೩೮ ॥**

೩೭-೩೮. ಅಧಿಷ್ಠಾನವು ತಾನೊಂದೇ ಜೀವನಾಗಲಾರದು, ಏಕೆಂದರೆ ಅದು ವಿಕಾರವಿಲ್ಲದ್ದಾಗಿದೆ ; ಚಿದಾಭಾಸನು ಪರಮಾರ್ಥನಲ್ಲವಾದ್ದರಿಂದ ಅವನೂ ಜೀವನಲ್ಲ ; ಬುದ್ಧಿಯು ಜಡವಾದ್ದರಿಂದ ಅದೂ ತಾನೊಂದೇ ಜೀವನಾಗಲಾರದು. ಆದ್ದರಿಂದ **ಆಭಾಸ, ಕೂಟಸ್ಥ, ಬುದ್ಧಿ- ಈ ಮೂರೂ ಸೇರಿ ಜೀವನಾಗಿರುತ್ತಾನೆ.**

ಅಧಿಷ್ಠಾನವಾದ ಚೈತನ್ಯವು ಕೂಟಸ್ಥವು, ಎಂದರೆ ಮಾರ್ಪಾಡಿಲ್ಲದ್ದು ; ಬುದ್ಧಿಯು, ಎಂದರೆ ಅಂತಃಕರಣವು ಮಾರ್ಪಾಡುಳ್ಳದ್ದಾದರೂ ಚೈತನ್ಯವಲ್ಲ ; ಚಿದಾಭಾಸನು, ಎಂದರೆ ಅಂತಃಕರಣದಲ್ಲಿ ನಾನೆಂದು ಚೈತನ್ಯದಂತೆ ತೋರುವದು, ಬರಿಯ ತೋರಿಕೆ, ಹೀಗೆ ಒಂದೊಂದನ್ನೇ ಬಿಡಿಸಿ ನೋಡಿದರೆ ಯಾವದೊಂದೂ ಜೀವನಾಗಲಾರನಾದ್ದರಿಂದ ನಿಜವಾಗಿ ಸಂಸಾರಿಯೇ ಇಲ್ಲ. ಆದರೂ ಈ ಮೂರನ್ನೂ ತಿಳಿದುಕೊಳ್ಳಲಾರದೆ ಇರುವಾಗ ಜನರು ಇವುಗಳ ಗುಂಪನ್ನೇ

ಒಟ್ಟಾಗಿ 'ಜೀವ'ನೆಂದು ಕಲ್ಪಿಸಿಕೊಳ್ಳುತ್ತಾರೆ- ಎಂದು ಭಾವ.

**ಮಾಯಾಭಾಸೋ ವಿಶುದ್ಧಾತ್ಮಾ ತ್ರಯಮೇತನ್ಮಹೇಶ್ವರಃ ।**
**ಮಾಯಾಭಾಸೋಽಪ್ಯವಸ್ತುತ್ವಾತ್ ಪ್ರತ್ಯೇಕಂ ನೇಶ್ವರೋ ಭವೇತ್ ॥ ೩೯ ॥**
**ಪೂರ್ಣತ್ವಾನ್ನಿರ್ವಿಕಾರತ್ವಾದ್ವಿಶುದ್ಧೋ ನ ಮಹೇಶ್ವರಃ[1] ।**
**ಜಡತ್ವಹೇತೋರ್ಮಾಯಾಯಾಮೀಶ್ವರತ್ವಂ ತು ದುರ್ಘಟಮ್ ॥ ೪೦ ॥**
**ತಸ್ಮಾದೇತತ್ ತ್ರಯಂ ಮಿಥ್ಯಾತದರ್ಥೋ ಹೀಶ್ವರೋ ಭವೇತ್[2] ।**
**ಇತಿ ಜೀವೇಶ್ವರೌ ಭಾತಃ ಸ್ವಾಜ್ಞಾನಾನ್ನ ಹಿ ವಸ್ತುತಃ ॥ ೪೧ ॥**

೩೯-೪೧. ಮಾಯೆ, ಅದರಲ್ಲಿರುವ ಆಭಾಸ, ಶುದ್ಧಚೈತನ್ಯ- ಈ ಮೂರೂ ಸೇರಿ ಮಹೇಶ್ವರನೆನಿಸುವದು. ಮಾಯಾಭಾಸವೂ (ಚಿದಾಭಾಸನಂತೆ) ಪರಮಾರ್ಥವಸ್ತುವಲ್ಲದ್ದರಿಂದ ಈಶ್ವರನಲ್ಲ ; ಶುದ್ಧಾತ್ಮನು ಪೂರ್ಣನಾಗಿ ಯಾವ ಮಾರ್ಪಾಡೂ ಇಲ್ಲದವನಾಗಿರುವದರಿಂದ ಮಹೇಶ್ವರನಲ್ಲ ; ಮಾಯೆಯು ಜಡವಾಗಿರುವದರಿಂದ ಅದೊಂದನ್ನೇ ಈಶ್ವರನೆನ್ನುವದಂತೂ ಆಗದ ಮಾತು. ಆದ್ದರಿಂದ ಈ ಮೂರು ಸೇರಿ ತತ್ಪದಕ್ಕೆ ಮಿಥ್ಯಾರ್ಥವಾಗಿರುವವು. ಆದ್ದರಿಂದ ಜೀವ, ಈಶ್ವರ- ಇಬ್ಬರೂ ಆತ್ಮನ ಅಜ್ಞಾನದಿಂದ ತೋರುವರೇ ಹೊರತು ನಿಜವಾಗಿರುವದಿಲ್ಲ.

**ಟಿಪ್ಪಣಿ :** 'ತಸ್ಮಾದೇತತ್ ತ್ರಯಂ ಮಿಥ್ಯಾ'- ಆದ್ದರಿಂದ ಈ ಮೂರೂ ಮಿಥ್ಯೆಯೇ ಎಂದು ಅರ್ಥಮಾಡುವದು ಸರಿಯಲ್ಲ ; ಏಕೆಂದರೆ ಮಾಯೆಯೂ ಆಭಾಸರೂಪವೂ ಮಿಥ್ಯೆಯಾದರೂ ವಿಶುದ್ಧಾತ್ಮನು ಮಿಥ್ಯೆಯಾಗಲಾರನು. ಅಂತಃಕರಣ, ಚಿದಾಭಾಸ, ಕೂಟಸ್ಥನಾದ ಸಾಕ್ಷಿ- **ಈ ಮೂರನ್ನೂ ಕಲೆಬೆರಕೆಮಾಡಿಕೊಂಡು ವ್ಯವಹರಿಸುವ ಜೀವನೇ ತ್ವಂಪದಕ್ಕೆ ವಾಚ್ಯಾರ್ಥವಾಗಿರುವಂತೆ ಮಾಯೆ, ಮಾಯಾಭಾಸ, ವಿಶುದ್ಧನಾದ ಆತ್ಮ-**

1. 'ವಿಶುದ್ಧತ್ವಾನ್ಮಹೇಶ್ವರಃ' (= ವಿಶುದ್ಧವಾಗಿರುವದರಿಂದ ಮಹೇಶ್ವರನು) ಎಂಬ ಪಾಠವು ಸಂದರ್ಭಕ್ಕೆ ಹೊಂದುವದಿಲ್ಲ.

2. ತದರ್ಥೋ ನೇಶ್ವರೋ ಭವೇತ್ (ತತ್ಪದಾರ್ಥವಾದ ಈಶ್ವರನಲ್ಲ) ಎಂಬ ಪಾಠದಲ್ಲಿ ಈಶ್ವರನು ಯಾರೆಂಬುದೇ ನಿರ್ಧಾರವಾದಂತಾಗುವದಿಲ್ಲ.

**ಈ ಮೂರನ್ನೂ ಕಲೆಬೆರಕೆಮಾಡಿಕೊಂಡು ವ್ಯವಹರಿಸುವ ಈಶ್ವರನೇ ತತ್ಪದಕ್ಕೆ ವಾಚ್ಯಾರ್ಥವು ;** ಇವೆರಡಕ್ಕೂ ಲಕ್ಷ್ಯಾರ್ಥವಾದ ಚೈತನ್ಯವು ಒಂದೇ ಎಂಬುದೇ ಗ್ರಂಥಕರ್ತರ ಆಶಯವು. ಇಲ್ಲಿ ವರ್ಣಿಸಿರುವಂತೆ ಜೀವೇಶ್ವರರನ್ನು ವರ್ಣಿಸಿರುವದು ಪ್ರಸ್ಥಾನತ್ರಯಭಾಷ್ಯದಲ್ಲಿ ಕಂಡುಬರುವದಿಲ್ಲ. ಸೂತ್ರಭಾಷ್ಯದಲ್ಲಿ ಈ ವರ್ಣನೆಯು ಹೇಗಿರುವದೆಂಬುದನ್ನು **ಪರಿಶಿಷ್ಟ**ದಲ್ಲಿ ತಿಳಿಸಿರುತ ದೆ.

**ಘಟಾಕಾಶಮಠಾಕಾಶೌ ಮಹಾಕಾಶೇ ಪ್ರಕಲ್ಪಿತೌ ।**
**ಏವಂ ಮಯಿ ಚಿದಾಕಾಶೇ ಜೀವೇಶೌ ಪರಿಕಲ್ಪಿತೌ** ॥ ೪೨ ॥

**ಮಾಯಾತತ್ಕಾರ್ಯವಿಲಯೇ ನೇಶ್ವರತ್ವಂ ನ ಜೀವತಾ।**
**ತತಃ ಶುದ್ಧಚಿದೇವಾಹಂ ಚಿದ್ವ್ಯೋಮ ನಿರುಪಾಧಿಕಃ** ॥ ೪೩ ॥

೪೨-೪೩. ಗಡಿಗೆಯ ಬಯಲು, ಮಠದ ಬಯಲು- ಇವೆರಡೂ ದೊಡ್ಡಬಯಲಿನಲ್ಲಿ ಕಲ್ಪಿತವಾಗಿರುವವು. ಇದರಂತೆ ಚಿದಾಕಾಶನಾಗಿರುವ ನನ್ನಲ್ಲಿ ಜೀವ, ಈಶ್ವರ- ಇಬ್ಬರೂ ಕಲ್ಪಿತರಾಗಿರುವರು. ಮಾಯೆ, ಅದರ ಕಾರ್ಯ- ಇವುಗಳು ನಾಶವಾದರೆ ಈಶ್ವರತ್ವವೂ ಇಲ್ಲ, ಜೀವತ್ವವೂ ಇಲ್ಲ. ಆದ್ದರಿಂದ ನಾನು ಬರಿಯ ಚೈತನ್ಯವೇ, ಯಾವ ಉಪಾಧಿಯೂ ಇಲ್ಲದ್ದರಿಂದ ಚಿದಾಕಾಶವೇ.

**ಟಿಪ್ಪಣಿ :** ಈ ಎರಡು ಶ್ಲೋಕಗಳೂ **ವರಾಹೋಪನಿಷತ್ತಿನಲ್ಲಿವೆ.**

**ಸತ್ಯಚಿದ್ಘನಮನನ್ತಮವ್ಯಯಂ**
**ಸರ್ವದೃಶ್ಯರಹಿತಂ ನಿರಾಮಯಮ್ ।**
**ಯತ್ಪದಂ ವಿಮಲಮದ್ವಯಂ ಶಿವಂ**
**ತತ್ಸದಾಹಮಿತಿ ಮೌನಮಾಶ್ರಯೇ** ॥ ೪೪ ॥

೪೪. ಸತ್ಯವೂ ಚೈತನ್ಯದ ಗಟ್ಟಿಯೂ, ಅಂತವಿಲ್ಲದ್ದೂ, ನಾಶವಿಲ್ಲದ್ದೂ, ಯಾವ ದೃಶ್ಯವಿಷಯವೂ ಇಲ್ಲದ್ದೂ, ದೋಷವಿಲ್ಲದ್ದೂ ಆಗಿರುವ

ನಿರ್ಮಲವಾದ ಮಂಗಲಕರವಾದ ಅದ್ವಯಸ್ಥಾನವು ಯಾವದೋ ಅದೇ ನಾನು ಯಾವಾಗಲೂ ಆಗಿರುವೆನಾದ್ದರಿಂದ ಮೌನವನ್ನವಲಂಬಿಸಿರುವೆನು.

**ಪೂರ್ಣಮವ್ಯಯಮಖಣ್ಡ ಚೇತನಂ**
**ವಿಶ್ವಭೇದಕಲನಾದಿವರ್ಜಿತಮ್ ।**
**ಅದ್ವಿತೀಯಪರಸಂವಿದಂಶಕಂ**
**ತತ್ಸದಾಹಮಿತಿ ಮೌನಮಾಶ್ರಯೇ ॥ ೪೫ ॥**

೪೫. ಪೂರ್ಣವಾಗಿಯೂ ನಾಶವಿಲ್ಲದ್ದಾಗಿಯೂ ಅಖಂಡವಾದ ಚೈತನ್ಯವಾಗಿಯೂ ಪ್ರಪಂಚವೆಂಬ ಭೇದನಿಮಿತ್ತವೇ ಮುಂತಾದದ್ದಿಲ್ಲವಾಗಿಯೂ ಅದ್ವಿತೀಯವಾದ ಹೆಚ್ಚಿನ ಚೈತನ್ಯದ ಅಂಶವಾಗಿಯೂ ಇರುವ ತತ್ತ್ವವೇ ನಾನು ಯಾವಾಗಲೂ ಆಗಿರುವೆನಾದ್ದರಿಂದ ಮೌನವನ್ನವಲಂಬಿಸಿರುವೆನು.

**ಟಿಪ್ಪಣಿ** : 'ಸಂವಿದಂಶಕಮ್' ಎಂಬುದು 'ಸಂವಿದಾತ್ಮಕಮ್' ಎಂದಿದ್ದರೆ ಚೆನ್ನಾಗಿದ್ದೀತೆಂದು ತೋರುವದು, ಏಕೆಂದರೆ ಪರಮಾತ್ಮನು ಚೈತನ್ಯದ ಅಂಶವಲ್ಲ, ಚೈತನ್ಯವೇ ಅವನು.

**ಜನ್ಮಮೃತ್ಯುಸುಖದುಃಖವರ್ಜಿತಂ**
**ಜಾತಿನೀತಿಕುಲಗೋತ್ರದೂರಗಮ್ ॥**
**ಚಿದ್ವಿವರ್ತಜಗತೋಽಸ್ಯ ಕಾರಣಂ**
**ತತ್ಸದಾಹಮಿತಿ ಮೌನಮಾಶ್ರಯೇ ॥ ೪೬ ॥**

೪೬. ಹುಟ್ಟು, ಸಾವು, ಸುಖ, ದುಃಖ- ಇವುಗಳಿಲ್ಲದ್ದೂ ಜಾತಿ, ನೀತಿ, ಕುಲ, ಗೋತ್ರ- ಇವುಗಳಿಗೆ ದೂರವಾದದ್ದೂ ಚೈತನ್ಯದ ವಿವರ್ತವಾದ ಈ ಜಗತ್ತಿಗೆ ಕಾರಣವೂ ಆಗಿರುವ ತತ್ತ್ವವು ಯಾವದೋ ಅದು ಯಾವಾಗಲೂ ನಾನಾದ್ದರಿಂದ ಮೌನವನ್ನವಲಂಬಿಸಿರುವೆನು.

**ಟಿಪ್ಪಣಿ** : ಮೇಲಿನ ೪೪, ೪೬ - ಈ ಮೂರು ಶ್ಲೋಕಗಳೂ **ವರಾಹೋಪನಿಷತ್ತಿ**ನಲ್ಲಿವೆ.

**ಉಲೂಕಸ್ಯ ಯಥಾ ಭಾನಾವನ್ಧಕಾರಃ ಪ್ರತೀಯತೇ ।**
**ಸ್ವಪ್ರಕಾಶೇ ಪರಾನನ್ದೇ ತಮೋ ಮೂಢಸ್ಯ ಭಾಸತೇ ॥ ೪೭ ॥**

೪೭. ಗೂಬೆಗೆ ಹೇಗೆ ಸೂರ್ಯನಲ್ಲಿ ಕತ್ತಲೆಯಿರುವಂತೆ ತೋರುವದೋ ಹಾಗೆ ಮೂಢನಿಗೆ ಸ್ವಪ್ರಕಾಶವಾದ ಪರಮಾನಂದ ಸ್ವರೂಪದಲ್ಲಿ ಅಜ್ಞಾನವು ತೋರುತ್ತದೆ.

**ಯಥಾ ದೃಷ್ಟಿನಿರೋಧಾರ್ತೋ ಸೂರ್ಯೋ ನಾಸ್ತೀತಿ ಮನ್ಯತೇ ।**
**ತಥಾಜ್ಞಾನಾವೃತೋ ದೇಹೀ ಬ್ರಹ್ಮ ನಾಸ್ತೀತಿ ಮನ್ಯತೇ ॥ ೪೮ ॥**

೪೮. ಹೇಗೆ ಕಣ್ಣುರುಡಿನಿಂದ ಸಂಕಟಪಡುತ್ತಿರುವವನು ಸೂರ್ಯನಿಲ್ಲವೆಂದು ತಿಳಿಯುವನೋ ಹಾಗೆ ಅಜ್ಞಾನವು ಮುಸುಕಿರುವ ದೇಹಿಯು ಬ್ರಹ್ಮವಿಲ್ಲವೆಂದು ತಿಳಿಯುತ್ತಾನೆ.

**ಯಥಾಽಮೃತಂ ವಿಷಾದ್ಭಿನ್ನಂ ವಿಷದೋಷೈರ್ನ ಲಿಪ್ಯತೇ ।**
**ನ ಸ್ಪೃಶಾಮಿ ಜಡಾದ್ಭಿನ್ನೋ ಜಡದೋಷಾನ್ ಪ್ರಕಾಶಯನ್ ॥ ೪೯ ॥**

೪೯. ಹೇಗೆ ಅಮೃತವು ವಿಷಕ್ಕಿಂತ ಬೇರೆಯಾಗಿದ್ದು ವಿಷದ ದೋಷಗಳನ್ನು ಅಂಟಿಸಿಕೊಳ್ಳದೆ ಇರುವದೋ, ಅದರಂತೆ ಜಡದ ದೋಷಗಳನ್ನು ಬೆಳಗುತ್ತ ಜಡಕ್ಕಿಂತ ಬೇರೆಯಾಗಿರುವದರಿಂದ ಅವುಗಳನ್ನು ನಾನು ಸೋಂಕದೆ ಇರುತ್ತೇನೆ.

**ಸ್ವಲ್ಪಾಪಿ ದೀಪಕಲಿಕಾ ಬಹುಲಂ ನಾಶಯೇತ್ ತಮಃ ।**
**ಸ್ವಲ್ಪೋಽಪಿ ಬೋಧೋ ಮಹತೀಮವಿದ್ಯಾಂ ಶಮಯೇತ್ ತಥಾ ॥ ೫೦ ॥**

೫೦. ದೀಪದ ಕುಡಿಯು ತಾನು ಸಣ್ಣದಾದರೂ ದೊಡ್ಡ ಕತ್ತಲೆಯನ್ನು ಹೇಗೆ ಹೋಗಲಾಡಿಸಬಲ್ಲದೋ ಅದರಂತೆ ಜ್ಞಾನವು ತಾನು ಸಣ್ಣದಾದರೂ ದೊಡ್ಡ ಅವಿದ್ಯೆಯನ್ನು ನಾಶಗೊಳಿಸುವದು.

**ಟಿಪ್ಪಣಿ :** ಜ್ಞಾನಾಜ್ಞಾನಗಳನ್ನು ಸಣ್ಣದು, ದೊಡ್ಡದು-ಎಂದು ವಿಂಗಡಿಸುವದಕ್ಕೆ ಆಗುವದಿಲ್ಲವಾದರೂ ಎಷ್ಟೋ ಕಾಲದಿಂದ ನಡೆದು ಕೊಂಡುಬಂದಿರುವದಾಗಿಯೂ ಇಷ್ಟು ದೊಡ್ಡ ಪ್ರಪಂಚವನ್ನೆಲ್ಲ ತೋರಿಸು

ತ್ತಿರುವದಾಗಿಯೂ ಇರುವ ಅಜ್ಞಾನವನ್ನು ಈಗತಾನೆ ಹುಟ್ಟಿರುವ ಆತ್ಮಜ್ಞಾನವು ಹೇಗೆ ನಾಶಪಡಿಸೀತು ?- ಎಂಬ ಶಂಕೆಗೆ ಇದು ಪರಿಹಾರವೆಂದು ತಿಳಿಯಬೇಕು.

**ಚಿದ್ರೂಪತ್ವಾನ್ನ ಮೇ ಜಾಡ್ಯಂ ಸತ್ಯತ್ವಾನ್ನಾನೃತಂ ಮಮ ।**
**ಆನನ್ದತ್ವಾನ್ನ ಮೇ ದುಃಖಮಜ್ಞಾನಾದ್ಭಾತಿ ತತ್ತ್ರಯಮ್ ॥ ೫೧ ॥**

೫೧. ನಾನು ಚೈತನ್ಯರೂಪನಾಗಿರುವದರಿಂದ ನನ್ನಲ್ಲಿ ಜಡತ್ವವಿಲ್ಲ ; ಪರಮಾರ್ಥಸತ್ಯನಾಗಿರುವದರಿಂದ ನನ್ನಲ್ಲಿ ಮಿಥ್ಯಾತ್ವವಿಲ್ಲ ; ಆನಂದ ಸ್ವರೂಪನಾಗಿರುವದರಿಂದ ನನ್ನಲ್ಲಿ ದುಃಖವಿಲ್ಲ. ಅಜ್ಞಾನದಿಂದ ಈ ಮೂರೂ ತೋರುತ್ತಿರುವದು.

**ಕಾಲತ್ರಯೇ ಯಥಾ ಸರ್ಪೋ ರಜ್ಜೌ ನಾಸ್ತಿ ತಥಾ ಮಯಿ ।**
**ಅಹಂಕಾರಾದಿದೇಹಾನ್ತಂ ಜಗನ್ನಾಸ್ತ್ಯಹಮದ್ವಯಃ ॥ ೫೨ ॥**

೫೨. ಹಗ್ಗದಲ್ಲಿ ಭೂತ, ಭವಿಷ್ಯತ್, ವರ್ತಮಾನ- ಎಂಬ ಮೂರುಕಾಲದಲ್ಲಿಯೂ ಹೇಗೆ ಹಾವಿಲ್ಲವೋ ಹಾಗೆ ನನ್ನಲ್ಲಿ ಅಹಂಕಾರವನ್ನು ಮೊದಲುಮಾಡಿಕೊಂಡು ದೇಹದವರೆಗಿನ ಜಗತ್ತು ಮೂರುಕಾಲದಲ್ಲಿಯೂ ಇಲ್ಲ. ನಾನು ಎರಡನೆಯದಿಲ್ಲದವನು.

**ಭಾನೌ ತಮಃ ಪ್ರಕಾಶತ್ವಾನ್ನಾಙ್ಗೀಕುರ್ವನ್ತಿ ಸಜ್ಜನಾಃ ।**
**ತಮಸ್ತತ್ಕಾರ್ಯಸಾಕ್ಷೀತಿ ಭ್ರಾನ್ತಬುದ್ಧಿರಹೋ ಮಯಿ ॥ ೫೩ ॥**

೫೩. ಸೂರ್ಯನು ಪ್ರಕಾಶರೂಪನಾದ್ದರಿಂದ ಸತ್ಪುರುಷರು ಅವನಲ್ಲಿ ಕತ್ತಲೆಯಿದೆಯೆಂದು ಒಪ್ಪುವದಿಲ್ಲ. ಆದರೆ ಚೈತನ್ಯಸ್ವರೂಪನಾದ ನನ್ನಲ್ಲಿ ಅಜ್ಞಾನ ಮತ್ತು ಅದರ ಕಾರ್ಯದ ಸಾಕ್ಷಿತ್ವವಿದೆಯೆಂದು ಭ್ರಾಂತರು ತಿಳಿದುಕೊಂಡಿರುವರಲ್ಲ ! ಆಶ್ಚರ್ಯವು.

**ಟಿಪ್ಪಣಿ :** ಸೂರ್ಯನು ಕತ್ತಲೆಯನ್ನು ಎಂದಿಗೂ ನೋಡದಿರುವಂತೆ ಆತ್ಮಚೈತನ್ಯವು ಅಜ್ಞಾನವನ್ನು ಎಂದಿಗೂ ನೋಡದೆ ಇದೆಯೆಂಬುದೇ ಪರಮಾರ್ಥವು.

**ಯಥಾ ಶೀತಂ ಜಲಂ ವಹ್ನಿಸಂಬನ್ಧಾದುಷ್ಣವದ್ಭವೇತ್ ।**
**ಬುದ್ಧಿತಾದಾತ್ಮ್ಯಸಂಬನ್ಧಾತ್ ಕರ್ತೃತ್ವಂ ವಸ್ತುತೋ ನ ಹಿ ॥ ೫೪॥**

೫೪. ಹೇಗೆ ಸ್ವಭಾವದಿಂದ ತಣ್ಣಗಿರುವ ನೀರು ಬೆಂಕಿಯ ಸಂಬಂಧದಿಂದ ಬೆಚ್ಚಗಿರುವಂತೆ ತೋರುವದೋ ಅದರಂತೆ ಬುದ್ಧಿಯೊಡನೆ ತಾದಾತ್ಮ್ಯಸಂಬಂಧದಿಂದ ಆತ್ಮನಲ್ಲಿ ತೋರುವ ಕರ್ತೃತ್ವವು ನಿಜವಾಗಿ ಇರುವದಿಲ್ಲ.

**ಜಲಬಿನ್ದುಭಿರಾಕಾಶಂ ನ ಸಿಕ್ತಂ ನ ಚ ಶುಧ್ಯತಿ[1] ।**
**ತಥಾ ಗಙ್ಗಾಜಲೇನಾಯಂ ನ ಶುದ್ಧೋ ನಿತ್ಯಶುದ್ಧತಃ ॥ ೫೫ ॥**

೫೫. ನೀರುಹನಿಗಳಿಂದ ಆಕಾಶವನ್ನು ಚಿಮುಕಿಸುವದಕ್ಕಾಗುವದಿಲ್ಲ, ಅದರಿಂದ ಅದು ಶುದ್ಧವಾಗುವದೂ ಇಲ್ಲ. ಹಾಗೆಯೇ ಈ ಆತ್ಮನು ಗಂಗೆಯ ಜಲದಿಂದ ಶುದ್ಧನಾಗುವದಿಲ್ಲ, ಏಕೆಂದರೆ ಅವನು ಯಾವಾಗಲೂ ಶುದ್ಧನಾಗಿರುತ್ತಾನೆ.

**ವೃಕ್ಷೋತ್ಪನ್ನಫಲೈರ್ವೃಕ್ಷೋ ಯಥಾ ತೃಪ್ತಿಂ ನ ಗಚ್ಛತಿ ।**
**ಮಯ್ಯಧ್ಯಸ್ತಾನ್ನಪಾನಾದ್ಯೈಸ್ತಥಾ ತೃಪ್ತಿರ್ನ ವಿದ್ಯತೇ ॥ ೫೬ ॥**

೫೬. ಮರದಲ್ಲಿ ಹುಟ್ಟಿದ ಹಣ್ಣುಗಳಿಂದ ಮ[illegible] ಹೇಗೆ ತೃಪ್ತಿಯಾಗುವದಿಲ್ಲವೋ ಅದರಂತೆ ನನ್ನಲ್ಲಿ ಅಧ್ಯಸ್ತವಾಗಿರುವ ಅನ್ನಪಾನಾದಿಗಳಿಂದ ನನಗೆ ತೃಪ್ತಿಯಾಗುವದಿಲ್ಲ.

**ಟಿಪ್ಪಣಿ :** ಆತ್ಮನು ನಿತ್ಯತೃಪ್ತನು, ಮತ್ತೊಂದರಿಂದ ಅವನಿಗೆ ತೃಪ್ತಿಯಾಗಬೇಕಾದದ್ದಿಲ್ಲ.

**ಸ್ಥಾಣೌ ಪ್ರಕಲ್ಪಿತಶ್ಚೋರಃ ಸ ಸ್ಥಾಣುತ್ವಂ ನ ಬಾಧತೇ ।**
**ಸ್ವಸ್ಮಿನ್ ಕಲ್ಪಿತಜೀವಶ್ಚ ಸ್ವಂ ಬಾಧಿತುಮಶಕ್ಯತೇ[2] ॥ ೫೭ ॥**

1. ನ ಚ ಶುಷ್ಯತಿ (ಒಣಗುವದೂ ಇಲ್ಲ) ಎಂಬ ಪಾಠವು ಪ್ರಕೃತಕ್ಕೆ ಬೇಡದ್ದು.

2. 'ಅಶಕ್ಯತೇ' ಎಂಬುದು ವ್ಯಾಕರಣಶುದ್ಧವಲ್ಲ ''ಜೀವಶ್ಚ ಸ್ವಸ್ಯ ಸ್ವತ್ವಂ ನ ಬಾಧ್ಯತೇ'' ಎಂದಿದ್ದರೆ ಶುದ್ಧವಾಗಿರುವದು.

೫೭. ಮೋಟುಮರದಲ್ಲಿ ಅಜ್ಞಾನದಿಂದ ಹುಟ್ಟುಗಟ್ಟಿರುವ ಕಳ್ಳನು ಅದು ಮೋಟುಮರವೆಂಬುದನ್ನು ಹೇಗೆ ಹೊಡೆದುಹಾಕಲಾರನೋ ಅದರಂತೆ ಆತ್ಮನಲ್ಲಿ ಕಲ್ಪಿತನಾದ ಜೀವನು ಆತ್ಮನ ಆತ್ಮತ್ವವನ್ನು ಹೊಡೆದುಹಾಕಲಾರನು.

**ಅಜ್ಞಾನೇ ಬುದ್ಧಿವಿಲಯೇ ನಿದ್ರಾ ಸಾ ಭಣ್ಯತೇ ಬುಧೈಃ ।**
**ವಿಲೀನಂ ಜ್ಞಾನತತ್ಕಾರ್ಯೇ ಮಯಿ ನಿದ್ರಾ ಕಥಂ ಭವೇತ್ ॥ ೫೮ ॥**

೫೮. ಅಜ್ಞಾನದಲ್ಲಿ ಬುದ್ಧಿಯು ಲಯವಾದರೆ ಆ ಅವಸ್ಥೆಯನ್ನು ತಿಳಿದವರು ನಿದ್ರೆಯೆಂದು ಕರೆಯುತ್ತಾರೆ. ಅಜ್ಞಾನವೂ ಅದರ ಕಾರ್ಯವೂ ಅಡಗಿರುವ ನನ್ನಲ್ಲಿ ನಿದ್ರೆ ಹೇಗೆ ಇದ್ದೀತು ?

**ಟಿಪ್ಪಣಿ** : ನಿದ್ರೆಯ ಲಕ್ಷಣವನ್ನು ಇಲ್ಲಿ ಹೇಳಿರುವದು ಭಾಷ್ಯ ಗ್ರಂಥಗಳಲ್ಲಿ ಕಂಡುಬರುವದಿಲ್ಲ.

**ಬುದ್ಧೇಃ ಪೂರ್ಣವಿಕಾಸೋಽಯಂ ಜಾಗರಃ ಪರಿಕೀರ್ತ್ಯತೇ ।**
**ವಿಕಾಸಾದಿವಿಹೀನತ್ವಾಜ್ಜಾಗರೋ[1] ಮೇ ನ ವಿದ್ಯತೇ ॥ ೫೯ ॥**

೫೯. ಅಂತಃಕರಣವು ಪೂರ್ಣವಾಗಿ ಅರಳಿಕೊಂಡರೆ ಅದು ಎಚ್ಚರವೆನಿಸುತ್ತದೆ. ಆದರೆ ವಿಕಾಸವೇ ಮುಂತಾದದ್ದು ಏನೂ ಇಲ್ಲದ್ದರಿಂದ ನನಗೆ ಎಚ್ಚರವೆಂಬುದಿಲ್ಲ.

**ಸೂಕ್ಷ್ಮನಾಡೀಷು ಸಞ್ಚಾರಾದ್ಬುದ್ಧೇಃ ಸ್ವಪ್ನಃ ಪ್ರಜಾಯತೇ ।**
**ಸಞ್ಚಾರಧರ್ಮರಹಿತೇ ಸ್ವಪ್ನೋ ನಾಸ್ತಿ ತಥಾ ಮಯಿ ॥ ೬೦ ॥**

೬೦. ಸಣ್ಣನಾಡಿಗಳಲ್ಲಿ ಸಂಚರಿಸುವದರಿಂದ ಅಂತಃಕರಣಕ್ಕೆ ಸ್ವಪ್ನವಾಗುತ್ತದೆ. ಸಂಚಾರವೆಂಬ ಧರ್ಮವಿಲ್ಲದ ನನ್ನಲ್ಲಿ ಹಾಗೆ ಸ್ವಪ್ನವು ಉಂಟಾಗಲಾರದು.

**ಟಿಪ್ಪಣಿ :** ಸ್ವಪ್ನವಾಗುವಾಗ ಹಿತವೆಂಬ ಹೆಸರಿನ ಸೂಕ್ಷ್ಮನಾಡಿಗಳಲ್ಲಿ ಜೀವನು ಸಂಚರಿಸುತ್ತಿರುವನೆಂದು **ಬೃಹದಾರಣ್ಯಕ** (೪-೩-೨೦)ದಲ್ಲಿದೆ.

---

1 'ವಿಕಾರಾದಿವಿಹೀನತ್ವಾತ್' (ವಿಕಾರವೇ ಮುಂತಾದದ್ದಿಲ್ಲವಾದ್ದರಿಂದ) ಎಂಬ ಪಾಠಕ್ಕಿಂತ ಈ ಪಾಠವೇ ಮೇಲು.

ಸುಷುಪ್ತಿಯಾಗುವಾಗಲೂ ಅದೇ ನಾಡಿಗಳಲ್ಲಿ ಜೀವನು ಹೊಕ್ಕಿರುತ್ತಾನೆಂದು ಈ ಉಪನಿಷತ್ತಿನ (೨-೧-೧೯) ರಲ್ಲಿ ಹೇಳಿದೆ.

**ಪರಿಪೂರ್ಣಸ್ಯ ನಿತ್ಯಸ್ಯ ಶುದ್ಧಸ್ಯ ಜ್ಯೋತಿಷೋ ಮಮ ।**
**ಆಗನ್ತುಕಮಲಾಭಾವಾತ್ ಕಿಂ ಸ್ನಾನೇನ ಪ್ರಯೋಜನಮ್ ॥ ೬೧ ॥**

೬೧. ಪರಿಪೂರ್ಣನಾಗಿಯೂ ನಿತ್ಯನಾಗಿಯೂ ಶುದ್ಧನಾಗಿಯೂ ಇರುವ ಜ್ಯೋತಿಯಾದ ನನಗೆ ಹೊರಗಿನಿಂದ ಬಂದು ಸೇರುವ ಕಲ್ಮಷವಿಲ್ಲದ್ದರಿಂದ ಸ್ನಾನದಿಂದ ಆಗಬೇಕಾದದ್ದೇನು ?

**ಟಿಪ್ಪಣಿ** ಜ್ಞಾನಿಯು ಸ್ನಾನವನ್ನು ಮಾಡುವದಿಲ್ಲವೆಂದಾಗಲಿ ಮಾಡಬಾರದೆಂದಾಗಲಿ ಇದರ ಅರ್ಥವಲ್ಲವೆಂಬುದನ್ನು ಹೇಳಬೇಕಾಗಿಲ್ಲ. ಹಿಂದಿನ ಎರಡು ಶ್ಲೋಕಗಳಲ್ಲಿ ತಿಳಿಸಿರುವಂತೆ ಆತ್ಮನು ಅವಸ್ಥಾತ್ರಯವನ್ನು ಮೀರಿರುವದರಿಂದ ಅವನು ಪರಿಪೂರ್ಣನಿತ್ಯಶುದ್ಧಚೈತನ್ಯನಾಗಿರುತ್ತಾನೆ ಅದ್ವಿತೀಯನಾದ ಅವನಿಗೆ ದೇಹಾದಿಗಳ ಧರ್ಮವಿಲ್ಲವೆಂಬುದನ್ನು ತಿಳಿಸುವದೇ ಈ ಮುಂದಿನ ಶ್ಲೋಕಗಳ ಉದ್ದೇಶವು. ಮಾಲಿನ್ಯವೂ ನೈರ್ಮಲ್ಯವೂ ದೇಹಕ್ಕೆ ಸೇರಿದ್ದು, ಆತ್ಮನು ಅದೇಹನಾದ್ದರಿಂದ ಅವನಿಗೆ ಸೇರಿದ್ದಲ್ಲವೆಂದು ಭಾವ.

**ದೇಶಾಭಾವಾತ್ ಕ್ವ ಗನ್ತವ್ಯಂ ಸ್ಥಾನಾಭಾವಾತ್ ಕ್ವ ವಾ ಸ್ಥಿತಿಃ ।**
**ಪೂರ್ಣೇ ಮಯಿ ಸ್ಥಾನದೇಶೌ ಕಲ್ಪಿತಾವಹಮದ್ವಯಃ ॥ ೬೨ ॥**

೬೨. ದೇಶವೆಂಬುದೇ ಇಲ್ಲದಿರುವದರಿಂದ ಹೋಗುವದೆಲ್ಲಿಗೆ ? ಸ್ಥಾನವೇ ಇಲ್ಲದಿರುವದರಿಂದ ನಿಲ್ಲುವದೆಲ್ಲಿ ? ಪೂರ್ಣನಾಗಿರುವ ನನ್ನಲ್ಲಿ ಸ್ಥಾನದೇಶಗಳೆರಡೂ ಕಲ್ಪಿತವಾಗಿರುತ್ತವೆ. ನಾನು ಅದ್ವಯನು.

**ಪ್ರಾಣಸಞ್ಚಾರಸಂಶೋಷಾತ್ ಪಿಪಾಸಾ ಜಾಯತೇ ಖಲು ।**
**ಶೋಷಣಾನರ್ಹಚಿದ್ರೂಪೇ ಮಯ್ಯೇಷಾ ಜಾಯತೇ ಕಥಮ್ ॥ ೬೩ ॥**

೬೩. ಪ್ರಾಣವು ಓಡಾಡುವದು, ಒಣಗಿಸುವದು- ಇವುಗಳಿಂದ ನೀರಡಿಕೆಯು ಉಂಟಾಗುತ್ತದಲ್ಲವೆ ? ಒಣಗಿಸುವದಕ್ಕಾಗದ ಚೈತನ್ಯರೂಪ ನಾದ ನನ್ನಲ್ಲಿ ಇದು ಹೇಗೆ ಆಗುವದು ?

**ನಾಡೀಷು ಪೀಡ್ಯಮಾನಾಸು ವಾಯ್ವಗ್ನಿಭ್ಯಾಂ ಭವೇತ್ ಕ್ಷುಧಾ ।**
**ತಯೋಃ ಪೀಡನಹೇತುತ್ವಾತ್ಸಂವಿದ್ರೂಪೇ ಕಥಂ ಮಯಿ ॥ ೬೪ ॥**

೬೪. ವಾಯು, ಅಗ್ನಿ- ಈ ಎರಡರಿಂದ ನಾಡಿಗಳು ಪ್ರಕೋಪ ವಾದರೆ ಹಸಿವಾಗುತ್ತದೆ. ಏಕೆಂದರೆ ಅವೆರಡೂ ಪ್ರಕೋಪಕ್ಕೆ ಹೇತುವಾಗಿರು ತ್ತವೆ. ಆದರೆ ಚೈತನ್ಯರೂಪನಾದ ನನ್ನಲ್ಲಿ ಅದು ಹೇಗೆ ಆದೀತು ?

**ಟಿಪ್ಪಣಿ** : ಆತ್ಮನನ್ನು ಸುಡುವದಕ್ಕಾಗುವದಿಲ್ಲ, ಒಣಗಿಸುವದ ಕ್ಕಾಗುವದಿಲ್ಲ- ಎಂದು ಮುಂತಾಗಿ ಹೇಳಿರುವ ಗೀತಾ (೩-೨೪) ಶ್ಲೋಕವನ್ನು ಇಲ್ಲಿ ನೆನಪಿಗೆ ತಂದುಕೊಳ್ಳಬೇಕು.

**ಶರೀರಸ್ಥಿತಿಶೈಥಿಲ್ಯಂ ಶ್ವೇತಲೋಮಸಮನ್ವಿತಮ್ ।**
**ಜರಾ ಭವತಿ ಸಾ ನಾಸ್ತಿ ನಿರಂಶೇ ಮಯಿ ಸರ್ವಗೇ ॥ ೬೫ ॥**

೬೫. ನರೆಯ ಕೂದಲೊಡನೆ ಕೂಡಿ ಶರೀರವು ಶಿಥಿಲವಾದರೆ ಮುಪ್ಪು ಉಂಟಾಗುತ್ತದೆ. ಯಾವ ಅವಯವವೂ ಇಲ್ಲದವನೂ ಸರ್ವವ್ಯಾಪಿಯೂ ಆದ ನನ್ನಲ್ಲಿ ಅದು ಇರುವದಿಲ್ಲ.

**ಟಿಪ್ಪಣಿ** : ಹಿಂದಿನ ಎರಡು ಶ್ಲೋಕಗಳಲ್ಲಿ ಹಸಿವು ನೀರಡಿಕೆಗಳನ್ನು ಆತ್ಮನಲ್ಲಿ ಅಲ್ಲಗಳೆದಿರುವಂತೆ ಇಲ್ಲಿ ಮುಪ್ಪನ್ನು ಇಲ್ಲವೆಂದಿದೆ. ಹಸಿವು ಬಾಯಾರಿಕೆ, ಮುಪ್ಪು, ಮರಣ, ಶೋಕ, ಮೋಹ- ಎಂಬ **ಷಡೂರ್ಮಿ** (ಆರು ಸಂಕಟ)ಗಳೂ ನಿತ್ಯನಿರವಸ್ಥನಾಗಿ ಅಶರೀರಿಯಾಗಿರುವ ಆತ್ಮನಿಗೆ ಇಲ್ಲವೆಂದು ಇದರಿಂದ ಹೇಳಿದಂತೆ ಆಯಿತೆಂದು ಇಟ್ಟುಕೊಳ್ಳಬಹುದು.

**ಯೋಷಿತ್ಕ್ರೀಡಾ ಸುಖಸ್ಯಾನ್ತರ್ಗರ್ವಾಢ್ಯಂ ಯೌವನಂ ಕಿಲ ।**
**ಆತ್ಮಾನನ್ದಪರೇ ಪೂರ್ಣೇ ಮಯಿ ನಾಸ್ತಿ ಹಿ ಯೌವನಮ್ ॥ ೬೬ ॥**

೬೬. ಸ್ತ್ರೀರತಿಯ ಸುಖಕ್ಕೆಂದು ಒಳಗೆ ಆಗುವ ಹೆಚ್ಚಿನ ಅಭಿಮಾನವಿರುವದೇ ಯೌವನವು. ಆತ್ಮಾನಂದದಲ್ಲಿಯೇ ತಾತ್ಪರ್ಯವುಳ್ಳ ಪೂರ್ಣನಾದ ನನ್ನಲ್ಲಿ ಯೌವನವು ಇಲ್ಲವೇ ಇಲ್ಲ.

**ಟಿಪ್ಪಣಿ :** ಮೇಲಿನ ಶ್ಲೋಕಗಳಲ್ಲೆಲ್ಲ ಪೂರ್ಣವೆಂದರೆ ನಿತ್ಯತೃಪ್ತವಾಗಿರುವ ಅದ್ವಿತೀಯವಸ್ತುವೆಂದೇ ಅರ್ಥ.

**ಮೂಢಬುದ್ಧಿಪರಿವ್ಯಾಪ್ತಂ ದುಃಖಾನಾಮಾಲಯಂ ಸದಾ ।**
**ಬಾಲ್ಯಂ ಕೋಪನಶೀಲಾನ್ತಂ ನ ಮೇ ಸುಖಜಲಾಮ್ಬುಧೇಃ ॥ ೬೭ ॥**

೬೭. ಅವಿವೇಕದಿಂದ ತುಂಬಿ ಯಾವಾಗಲೂ ದುಃಖಕ್ಕೆ ಆಸರೆಯಾಗಿ ಆಗಾಗ್ಗೆ ಸಿಟ್ಟಿನ ಸ್ವಭಾವದಲ್ಲಿ ಕಡೆಗಾಣುತ್ತಿರುವ ಬಾಲ್ಯವು ಆನಂದಸಾಗರನಾದ ನನಗೆ ಇರುವದಿಲ್ಲ.

**ಏವಂ ತತ್ತ್ವವಿಚಾರಾಬ್ಧೌ ನಿಮಗ್ನಾನಾಂ ಸದಾ ನೃಣಾಮ್ ।**
**ಪರಮಾದ್ವೈತವಿಜ್ಞಾನಮಪರೋಕ್ಷಂ ನ ಸಂಶಯಃ ॥ ೬೮ ॥**

೬೮. ಹೀಗೆ ತತ್ತ್ವವಿಚಾರವೆಂಬ ಸಾಗರದಲ್ಲಿ ಯಾವಾಗಲೂ ಮುಳುಗಿರುವ ಜನರಿಗೆ ಪರಮಾದ್ವೈತವಿಜ್ಞಾನವು ಅಪರೋಕ್ಷವಾಗುವದು, ಇದಕ್ಕೆ ಸಂಶಯವಿಲ್ಲ.

ಓಂ ತತ್‌ಸತ್

# ಪರಿಶಿಷ್ಟಗಳು

-----೦-----

## ೧. ಸೂತ್ರಭಾಷ್ಯದಲ್ಲಿ ಜೀವೇಶ್ವರವರ್ಣನೆ

(ಬ್ರಹ್ಮಸೂತ್ರ ೨-೧-೧೪)

**ಸರ್ವಜ್ಞಸ್ಯೇಶ್ವರಸ್ಯ ಆತ್ಮಭೂತೇ ಇವಾವಿದ್ಯಾಕಲ್ಪಿತೇ ನಾಮರೂಪೇ ತತ್ತ್ವಾನ್ಯತ್ವಾಭ್ಯಾಮನಿರ್ವಚನೀಯೇ ಸಂಸಾರಪ್ರಪಞ್ಚಬೀಜಭೂತೇ ಸರ್ವಜ್ಞಸ್ಯೇಶ್ವರಸ್ಯ ಮಾಯಾ, ಶಕ್ತಿಃ, ಪ್ರಕೃತಿರಿತಿ ಚ ಶ್ರುತಿಸ್ಮೃತ್ಯೋ ರಭಿಲಪ್ಯೇತೇ । ತಾಭ್ಯಾಮನ್ಯಃ ಸರ್ವಜ್ಞಃ ಈಶ್ವರಃ । ...... । ಏವಮವಿದ್ಯಾಕೃತನಾಮರೂಪೋಪಾಧ್ಯನುರೋಧೀಶ್ವರೋ ಭವತಿ, ವ್ಯೋಮೇವ ಘಟಕರಕಾದ್ಯುಪಾಧ್ಯನುರೋಧಿ । ಸ ಚ ಸ್ವಾತ್ಮಭೂತಾನೇವ ಘಟಾಕಾಶಸ್ಥಾನೀಯಾನ್ ಅವಿದ್ಯಾಪ್ರತ್ಯುಪಸ್ಥಾಪಿತನಾಮರೂಪಕೃತಕಾರ್ಯ-ಕರಣಸಙ್ಘಾತಾನುರೋಧಿನೋ ಜೀವಾಖ್ಯಾನ್ ವಿಜ್ಞಾನಾತ್ಮನಃ ಪ್ರತೀಷ್ಟೇ ವ್ಯವಹಾರವಿಷಯೇ ॥** **ಭಾ. ಭಾ-೪೪೦**

''ಸರ್ವಜ್ಞನಾದ ಈಶ್ವರನ ಸ್ವರೂಪವೋ ಎಂಬಂತೆ ಅವಿದ್ಯೆಯಿಂದ ಕಲ್ಪಿತವಾದ ನಾಮರೂಪಗಳನ್ನು ಈಶ್ವರನ ಸ್ವರೂಪವೆಂದೇ ಆಗಲಿ, ಅದಕ್ಕಿಂತ ಬೇರೆಯೇ ಎಂದಾಗಲಿ ಗೊತ್ತುಪಡಿಸಿ ತಿಳಿಸುವದಕ್ಕಾಗುವಂತಿಲ್ಲ. ಸಂಸಾರಪ್ರಪಂಚಕ್ಕೆ ಇವೇ ಬೀಜವಾಗಿರುತ್ತವೆ ; ಇವನ್ನು ಸರ್ವಜ್ಞನಾದ ಈಶ್ವರನ 'ಮಾಯೆ', 'ಶಕ್ತಿ', 'ಪ್ರಕೃತಿ'- ಎಂದು ಶ್ರುತಿಸ್ಮೃತಿಗಳಲ್ಲಿ ಕರೆದಿರುತ್ತದೆ. **ಈಶ್ವರನು** ಇವೆರಡಕ್ಕಿಂತಲೂ ಬೇರೆಯಾಗಿರುತ್ತಾನೆ.....

''ಹೀಗೆ ಅವಿದ್ಯೆಯಿಂದಾಗಿರುವ ನಾಮರೂಪಗಳೆಂಬ ಉಪಾಧಿ ಯನ್ನನುಸರಿಸಿರುವವನು ಈಶ್ವರನು ; ಆಕಾಶವು ಗಡಿಗೆ, ಕುಡಿಕೆ- ಮುತಾದ ಉಪಾಧಿಗಳನ್ನು ಅನುಸರಿಸಿರುವಂತೆಯೇ (ಈಶ್ವರನು ಈ ಉಪಾಧಿಗಳನ್ನು

ಅನುಸರಿಸಿಕೊಂಡಿರುತ್ತಾನೆ). ಮತ್ತು ಅವನು ತನ್ನ ಸ್ವರೂಪವೇ ಆಗಿರುವವರಾಗಿಯೂ ಉದಾಹರಣೆಗೆ ಗಡಿಗೆಯ ಬಯಲಿನಂತೆ ಇರುವವರಾಗಿಯೂ ಅವಿದ್ಯೆಯಿಂದ ಕಲ್ಪಿತವಾಗಿರುವ ದೇಹೇಂದ್ರಿಯಗಳ ಗುಂಪನ್ನು ಅನುಸರಿಸಿಕೊಂಡಿರುವವರಾಗಿಯೂ ಇರುವ ಜೀವರೆಂಬ ಹೆಸರಿನ ವಿಜ್ಞಾನಾತ್ಮರುಗಳನ್ನು ವ್ಯವಹಾರದೃಷ್ಟಿಯಿಂದ ಆಳುವವನಾಗಿರುತ್ತಾನೆ.''

ಮೇಲಿನ ಜೀವೇಶ್ವರವರ್ಣನೆಗೂ ಪ್ರಕೃತಗ್ರಂಥದಲ್ಲಿ ೩೬ ರಿಂದ ೪೧ನೆಯ ಶ್ಲೋಕಗಳವರೆಗಿನ ಭಾಗದಲ್ಲಿರುವ ವರ್ಣನೆಗೂ ಯಾವ ಯಾವ ತಾರತಮ್ಯವಿದೆಯೆಂಬುದನ್ನು ವಾಚಕರು ಸುಲಭವಾಗಿ ಊಹಿಸಬಹುದು.

(ಬ್ರಹ್ಮಸೂತ್ರ ೨-೩-೫೦, ಭಾ. ಭಾ. ೧೬೮)

**ಆಭಾಸ ಏವ ಚೈಷ ಜೀವಃ ಪರಸ್ಯ ಆತ್ಮನಃ ಜಲಸೂರ್ಯಕಾದಿವತ್ಪ್ರತಿಪತ್ತವ್ಯಃ । ನ ಸ ಏವ ಸಾಕ್ಷಾತ್, ನಾಪಿ ವಸ್ತ್ವಂತರಮ್ ॥**

''ಈ ಜೀವನು ನೀರಿನಲ್ಲಿ ತೋರುವ ಸೂರ್ಯಪ್ರತಿಬಿಂಬವೇ ಮುಂತಾದವುಗಳಂತೆ ಪರಮಾತ್ಮನ ಆಭಾಸವೇ ಎಂದು ತಿಳಿಯಬೇಕು. ಇವನು ನೇರಾಗಿ ಆತನೇ ಅಲ್ಲ, ತಾನೇ ಬೇರೆ ಒಂದು ವಸ್ತುವೂ ಅಲ್ಲ.''

(ಬ್ರಹ್ಮಸೂತ್ರ ೩-೨-೨೦, ಭಾ. ಭಾ. ೨೮೭)

**ಜಲಗತಂ ಹಿ ಸೂರ್ಯಪ್ರತಿಬಿಮ್ಬಂ ಜಲವೃದ್ಧೌ ವರ್ಧತೇ, ಜಲಹ್ರಾಸೇ ಹ್ರಸತಿ, ಜಲಚಲನೇ ಚಲತಿ, ಜಲಭೇದೇ ಭಿದ್ಯತೇ- ಇತ್ಯೇವಂ ಜಲಧರ್ಮಾನುಯಾಯಿ ಭವತಿ । ನ ತು ಪರಮಾರ್ಥತಃ ಸೂರ್ಯಸ್ಯ ತಥಾತ್ವಮಸ್ತಿ । ಏವಂ ಪರಮಾರ್ಥತೋಽವಿಕೃತಮೇಕರೂಪಮಪಿ ಸದ್ಬ್ರಹ್ಮ ದೇಹಾದ್ಯುಪಾಧ್ಯನ್ತರ್ಭಾವಾದ್ಭಜತ ಇವೋಪಾಧಿಧರ್ಮಾನ್ ವೃದ್ಧಿಹ್ರಾಸಾದೀನ್ । ಏವಮುಭಯೋರ್ದೃಷ್ಟಾನ್ತದಾರ್ಷ್ಟಾನ್ತಿಕಯೋಃ ಸಾಮಞ್ಜಸ್ಯಾತ್ ಅವಿರೋಧಃ ॥**

''ನೀರಿನಲ್ಲಿರುವ ಸೂರ್ಯಪ್ರತಿಬಿಂಬವು ನೀರು ದೊಡ್ಡದಾದರೆ ತಾನೂ ದೊಡ್ಡದಾಗುತ್ತದೆ, ಕಡಿಮೆಯಾದರೆ ತಾನೂ ಕಡಿಮೆಯಾಗುತ್ತದೆ ; ನೀರು ಅಲುಗಾಡಿದರೆ ತಾನೂ ಅಲುಗಾಡುತ್ತದೆ, ನೀರು ಬೇರೆಯಾದರೆ ತಾನೂ ಬೇರೆಯಾಗುತ್ತದೆ- ಹೀಗೆ ಅದು ನೀರಿನ ಧರ್ಮವನ್ನು ಅನುಸರಿಸಿಕೊಂಡಿರುತ್ತದೆ. ಅಲ್ಲವೆ ? ಆದರೆ ಸೂರ್ಯನಿಗೇನೂ ನಿಜವಾಗಿ ಆ ಧರ್ಮವುಂಟಾಗಿರುವದಿಲ್ಲ. ಇದರಂತೆಯೇ ಬ್ರಹ್ಮವು ನಿಜವಾಗಿ ಯಾವ ಮಾರ್ಪಾಡೂ ಇಲ್ಲದೆ ಒಂದೇ ರೂಪದಿಂದಿದ್ದುಕೊಂಡಿರುವದಾದರೂ ದೇಹವೇ ಮುಂತಾದ ಉಪಾಧಿಗಳೊಳಗೆ ಅಡಕವಾಗಿ ಆ ಉಪಾಧಿಗಳ ಧರ್ಮಗಳನ್ನು ಹೊಂದುವಂತೆ ತೋರುತ್ತದೆ. ಹೀಗೆ ದೃಷ್ಟಾಂತ, ದಾರ್ಷ್ಟಾಂತಿಕ- ಈ ಎರಡಕ್ಕೂ ಹೊಂದಿಕೆಯಿರುವದರಿಂದ ನಾವು ಕೊಟ್ಟಿರುವ ಹೋಲಿಕೆಯಲ್ಲಿ ಯಾವ ದೋಷವೂ ಇರುವದಿಲ್ಲ.''

ಆಚಾರ್ಯರು ಬರೆದಿರುವ ಈ ಭಾಷ್ಯಭಾಗಗಳನ್ನು ನೋಡಿದರೆ ಅವರು ಘಟಾಕಾಶಾದಿದೃಷ್ಟಾಂತಗಳನ್ನೂ, ಪ್ರತಿಬಿಂಬಾದಿದೃಷ್ಟಾಂತಗಳನ್ನೂ ಒಂದೊಂದು ಜೀವಧರ್ಮವನ್ನು ವಿಶದಪಡಿಸುವದಕ್ಕಾಗಿ ಕೊಟ್ಟಿದ್ದರೇ ಹೊರತು ನಿಜವಾಗಿ ಈಶ್ವರನು ಅಥವಾ ಜೀವನು ಉಪಾಧಿಯಿಂದ ಮಾರ್ಪಟ್ಟಿರುತ್ತಾನೆಂದಾಗಲಿ, ಉಪಾಧಿಯಲ್ಲಿ ಪ್ರತಿಬಿಂಬಿಸಿರುತ್ತಾನೆಂದಾಗಲಿ ಅವರ ಅಭಿಪ್ರಾಯವಲ್ಲವೆಂದು ಸ್ಪಷ್ಟವಾಗುತ್ತದೆ. ಈಶ್ವರನ ಪ್ರತಿಬಿಂಬವು ಮಾಯೆಯಲ್ಲಿ ಆಗಿರುವದೆಂಬುದನ್ನೂ ಜೀವನ ಪ್ರತಿಬಿಂಬವು ಅಂತಃಕರಣದಲ್ಲಿ ಆಗಿರುವದೆಂಬುದನ್ನೂ ಹೇಗೆ ತಿಳಿದುಕೊಳ್ಳಬೇಕೆಂಬುದು ಈಗ ವಾಚಕರಿಗೆ ತಾನೇ ಹೊಳೆಯುತ್ತದೆ.

------o------

## ೨. ಉಪಮಾನಗಳು

**ಸೂಚನೆ :** ಆತ್ಮಬೋಧದಲ್ಲಿರುವಂತೆಯೇ ಈ ಗ್ರಂಥದಲ್ಲಿ ಹಲವು ಉಪಮಾನಗಳಿವೆ ; ಇವು ವಿಷಯವನ್ನು ತಿಳಿಯಪಡಿಸುವದಕ್ಕೆ ಸಹಕಾರಿಗಳಾಗಿರುವದಲ್ಲದೆ ಗ್ರಂಥಕಾರರ ವ್ಯಕ್ತಿತ್ವವನ್ನು, ಗೊತ್ತುಪಡಿಸಬೇಕೆನ್ನುವವರಿಗೂ ಸಾಧಕವಾಗುತ್ತವೆ. ಇಲ್ಲಿ ಕೊಟ್ಟಿರುವವು ಶ್ಲೋಕದ ಸಂಖ್ಯೆಗಳು.

**ಅಮೃತ :** ಇದಕ್ಕೆ ವಿಷದ ದೋಷವಿಲ್ಲದಿರುವಂತೆ ಚೈತನ್ಯರೂಪನಾದ ಆತ್ಮನಿಗೆ ಜಡಧರ್ಮದ ಸೋಂಕಿಲ್ಲ. ೪೯.

**ಆಕಾಶ :** ನೀರಿನಿಂದ ನೆನೆಯುವದಿಲ್ಲ, ಶುದ್ಧಿಯಾಗುವದೂ ಇಲ್ಲ ; ಇದರಂತೆ ಆತ್ಮನಿಗೆ ಗಂಗಾಜಲದಿಂದ ಶುದ್ಧಿಯಿಲ್ಲ. ೫೫

**ಉಪ್ಪು :** ಇದು ನೀರಿನಲ್ಲಿ ಕರಗಿ ಕಾಣಿಸದೆ ಇರುವಂತೆ ಬ್ರಹ್ಮಾನಂದದಲ್ಲಿ ಮಗ್ನನಾದ ದೇಹಿಯು ಬೇರೆಯಾಗಿ ತೋರದೆ ಇರುವನು. ೨೫.

**ಕಂಬ :** ತನ್ನಲ್ಲಿ ಕಲ್ಪಿತನಾದ ಕಳ್ಳನಿಂದ ಇದಕ್ಕೇನೂ ಬಾಧೆಯಿಲ್ಲ ; ಇದರಂತೆ ಕಲ್ಪಿತಜೀವತ್ವದಿಂದ ಆತ್ಮನಿಗೆ ಬಾಧೆಯಿಲ್ಲ. ೫೭.

**ಕುರುಡ :** ಇವನು ಸೂರ್ಯನಿಲ್ಲವೆನ್ನುವಂತೆ ಅಜ್ಞನು ಬ್ರಹ್ಮವಿಲ್ಲವೆನ್ನುತ್ತಾನೆ. ೪೮.

**ದೀಪದ ಕುಡಿ :** ಸಣ್ಣದಾಗಿದ್ದರೂ ಹೆಚ್ಚಿನ ಕತ್ತಲೆಯನ್ನು ತೊಲಗಿಸುವಂತೆ ಜ್ಞಾನವು ಅನಾದ್ಯಜ್ಞಾನವನ್ನು ತೊಲಗಿಸುವದು. ೫೦.

**ನೀರು :** ಇದು ಬೆಂಕಿಯ ಬಿಸಿಯಿಂದ ಬೆಚ್ಚಗೆ ಕಾಣುವಂತೆ ಆತ್ಮನು ಬುದ್ಧಿಯ ಸಂಬಂಧದಿಂದ ಕರ್ತೃವಾಗಿ ತೋರುತ್ತಾನೆ. ೫೪.

**ನೀರುಗುಳ್ಳೆ ಮುಂತಾದವು :** ಇವು ಸಾಗರದಲ್ಲಿ ಕಲ್ಪಿತವಾಗಿರುವಂತೆ ಬ್ರಹ್ಮಾದಿಗಳು ಆತ್ಮನಲ್ಲಿ ಕಲ್ಪಿತರಾಗಿದ್ದಾರೆ. ೯.

**ಬಿಸಿಲುಕುದುರೆಯ ನೀರು :** ಇದು ನಿಜವಾಗಿ ಮರುಭೂಮಿಯೇ ಆಗಿರುವಂತೆ ಜಗತ್ತು ನಿಜವಾಗಿ ಚಿನ್ಮಾತ್ರಬ್ರಹ್ಮವೇ ಆಗಿರುವದು. ೮.

**ಬೆಲ್ಲ :** ಹಿಟ್ಟನ್ನೆಲ್ಲ ವ್ಯಾಪಿಸಿರುವ ಬೆಲ್ಲವು ಮತ್ತೊಂದು ಸಿಹಿಯನ್ನು ಬಯಸದಿರುವಂತೆ ಆನಂದರೂಪನಾದ ಆತ್ಮನು ವಿಷಯಸುಖದ ಬಯಕೆಯಿಲ್ಲದಿರುವನು. ೧೧.

**ಮರ :** ತನ್ನಲ್ಲಿಆಗುವ ಹಣ್ಣಿನಿಂದ ಇದಕ್ಕೆ ಆಗಬೇಕಾದ ತೃಪ್ತಿಯಿಲ್ಲ ; ಇದರಂತೆ

ತನ್ನಲ್ಲಿ ಅಧ್ಯಸ್ತವಾದ ಅನ್ನಪಾನಾದಿಗಳಿಂದ ಆತ್ಮನಿಗೆ ಆಗಬೇಕಾದ ತೃಪ್ತಿಯಿಲ್ಲ. ೫೬.

**ಮಹಾಕಾಶ :** ಇದರಲ್ಲಿ ಘಟಾಕಾಶಮಠಾಕಾಶಗಳು ಕಲ್ಪಿತವಾಗಿರುವಂತೆ ಚಿದಾತ್ಮನಲ್ಲಿ ಜೀವೇಶ್ವರತ್ವಗಳು ಕಲಿತವಾಗಿರುತ್ತವೆ. ೪೨.

**ಮೋಡಗಳು :** ಇವು ಆಕಾಶವನ್ನು ಮುಟ್ಟದಿರುವಂತೆ ಸಂಸಾರದ ದುಃಖಗಳು ಜ್ಞಾನಿಯನ್ನು ಮುಟ್ಟದಿರುವವು. ೨೯.

**ವಿಷ :** ಅಮೃತವನ್ನು ಕಂಡವನು ವಿಷವನ್ನು ದೂರವಾಗಿ ಬಿಡುವಂತೆ ಆತ್ಮನನ್ನು ಕಂಡವನು ಅನಾತ್ಮವನ್ನು ಬಿಡುತ್ತಾನೆ. ೧೩.

**ಸಕ್ಕರೆ :** ಇದು ಕಬ್ಬಿನಜಲ್ಲೆಯನ್ನು ಎಲ್ಲೆಲ್ಲಿಯೂ ವ್ಯಾಪಿಸಿರುವಂತೆ ಬ್ರಹ್ಮವು ಜಗತ್ತನ್ನು ವ್ಯಾಪಿಸಿರುವದು. ೭.

**ಸಮುದ್ರ :** ತಾನು ತೆರೆಯಾಗಬೇಕೆಂದು ಇದು ಇಚ್ಛಿಸುವದಿಲ್ಲ ; ಅದರಂತೆ ಆನಂದರೂಪನಾದ ಆತ್ಮನಿಗೆ ವಿಷಯಸುಖದ ಬಯಕೆಯಿಲ್ಲ. ೧೦.

**ಸಂಪತ್ತುಳ್ಳವನು :** ಇವನು ಬಡತನವನ್ನು ಹೇಗೆ ಬಯಸದಿರುವನೋ ಹಾಗೆ ಆತ್ಮಜ್ಞನಿಗೆ ವಿಷಯದಾಸೆ ಇರುವದಿಲ್ಲ. ೧೨.

**ಸೂರ್ಯ :** ತಾನು ಬೆಳಗುವ ಗಡಿಗೆಯು ನಾಶವಾದರೂ ಸೂರ್ಯನು ನಾಶವಾಗದಿರುವಂತೆ ದೇಹವನ್ನು ಬೆಳಗುವ ಆತ್ಮನು ದೇಹವು ನಾಶವಾದರೂ ನಾಶವಾಗದೆ ಇರುತ್ತಾನೆ. ೧೪.

**ಹಗ್ಗದ ಹಾವು :** ಹಗ್ಗದ ಇರವೇ ಇದರ ಇರವು ; ಇದರಂತೆ ಬ್ರಹ್ಮದ ಇರವೇ ಜಗತ್ತಿನ ಇರವು. ೬.

---o---

## ೩. ಶಬ್ದಾನುಕ್ರಮಣಿಕೆ

ಸೂಚನೆ :- ಇಲ್ಲಿ * ಹೀಗೆ ನಕ್ಷತ್ರಚಿಹ್ನೆಯಿಂದ ಗುರುತುಮಾಡಿರುವ ಶಬ್ದಗಳು ಪ್ರಸ್ಥಾನತ್ರಯಭಾಷ್ಯದಲ್ಲಿ ಕಂಡುಬರುವದಿಲ್ಲ, ಅಥವಾ ಎಲ್ಲಿಯೋ ಒಂದೊಂದು ಕಡೆ ಕಾಣಬರುತ್ತವೆ. ಇವು ಈಚಿನ ವೇದಾಂತ ಗ್ರಂಥಗಳಲ್ಲಿ ಬಹುವಾಗಿ ಪ್ರಯುಕ್ತವಾಗಿವೆ. ಗ್ರಂಥದ ಶೈಲಿಯಿಂದ

ಕರ್ತೃವನ್ನು ಊಹಿಸಬೇಕೆನ್ನುವವರಿಗೆ ಈ ಶಬ್ದಗಳ ಪಟ್ಟಿಯು ಪ್ರಯೋಜನ ಕರವಾಗಿರುವದು. ಶಬ್ದಗಳ ಮುಂದಿರುವ ಸಂಖ್ಯೆಯು ಗ್ರಂಥದ ಶ್ಲೋಕ ಸಂಖ್ಯೆಯನ್ನು ತಿಳಿಸುತ್ತದೆ.

★ **ಅಖಣ್ಡ ೧೮** - ಕಡಿವಡೆಯದ, ದೇಶಕಾಲವಸ್ತುಗಳಿಂದ ತುಂಡಾಗದ.

★ **ಅಖಣ್ಡಚೇತನ ೪೫** - ಕಡಿವಡೆಯದ ಅರಿವು, ಆತ್ಮ.

★ **ಅಖಣ್ಡಬೋಧ ೬** - ಒಂದೇ ಸಮವಾಗಿ ಚೈತನ್ಯವಾಗಿರುವ, ನಡುವೆ ಜಡದ ಸಂಬಂಧವೇ ಇಲ್ಲದ ಆತ್ಮ.

★ **ಅಜ್ಞಾನ ೧** - ತಿಳಿಯದಿರುವದು, ತಪ್ಪು ತಿಳಿವಳಿಕೆ ; ಜಗತ್ತಿಗೆ ಕಾರಣವಾದದ್ದೆಂಬ ಅರ್ಥದಲ್ಲಿ ಈಚಿನ ವೇದಾಂತಿಗಳಲ್ಲಿ ಬಳಕೆ.

★ **ಅಧಿಷ್ಠಾನ ೩೬, ೩೭** - ಆರೋಪಿಸುವ ಪದಾರ್ಥಕ್ಕೆ ಆಧಾರವಾಗಿರುವ ನಿಜವಾದ ವಸ್ತು ; ಉದಾಹರಣೆಗೆ ಕಪ್ಪೆಯಚಿಪ್ಪು ತನ್ನಲ್ಲಿ ಹುಟ್ಟುಗಟ್ಟಿರುವ ಬೆಳ್ಳಿಗೆ ಅಧಿಷ್ಠಾನ.

**ಅಧ್ಯಸ್ತ ೫೬** - ಕಲ್ಪಿತವಾದ

**ಅಪರೋಕ್ಷ ೬೮** - ಮರೆಯಾಗದೆ ನೇರಾಗಿ ತೋರುವದು.

**ಅವಿದ್ಯೆ ೫೦** - ಅಜ್ಞಾನ.

★ **ಈಶ್ವರ ೩೯** - ಮಾಯೆ, ಅದರಲ್ಲಿ ತೋರುವ ಆಭಾಸ, ಶುದ್ಧಚೈತನ್ಯ ಈ ಮೂರರ ಬೆರಕೆ ೪೦, ೪೧.

★ **ಕಾರಣದೇಹ ೩೩** - ಸ್ಥೂಲ ಸೂಕ್ಷ್ಮ ದೇಹಗಳಿಗೆ ಕಾರಣವಾಗಿರುವ ಅನಾದ್ಯಜ್ಞಾನ

★ **ಕೂಟಸ್ಥ ೩೮** - ಮಾರ್ಪಾಡಿಲ್ಲದ ಸಾಕ್ಷಿಯಾದ ಆತ್ಮ ; 'ವಿಕಾರವಿಲ್ಲದ' ಎಂಬ ಅರ್ಥದಲ್ಲಿ ಭಾಷ್ಯದಲ್ಲಿ ಬಹಳ ರೂಢಿ, ಚಿದಾಭಾಸನಿಗಿಂತ ವ್ಯತಿರಿಕ್ತನಾದ ಸಾಕ್ಷಿ- ಎಂಬರ್ಥದಲ್ಲಿ ಈಚಿನ ವೇದಾಂತಗ್ರಂಥಗಳಲ್ಲಿ ರೂಢಿ.

★ **ಚಿದಾಕಾಶ ೪೨, ೪೩** - ಆಕಾಶದಂತೆ ವ್ಯಾಪ್ತವಾಗಿರುವ ಚೈತನ್ಯ.

★ **ಚಿದಾಭಾಸ ೩೬** - ಚೈತನ್ಯದಂತೆ ತೋರುವ ಜೀವನಂಶ ; ಜೀವನೆಂಬ ಅರ್ಥದಲ್ಲಿ ಈಚಿನ ಗ್ರಂಥಗಳಲ್ಲಿ ಬಹಳ ರೂಢಿ.

★ **ಚಿದ್ವಿವರ್ತ ೪೬** - ಚೈತನ್ಯದಲ್ಲಿ ಭ್ರಾಂತಿಯಿಂದ ತೋರುವ.

★ **ಜಡ ೩೧, ೩೮, ೪೯** - ಅರಿವಿಲ್ಲದ ಪದಾರ್ಥ.

★ **ಜಾಡ್ಯ ೫೧** - ಜಡವಸ್ತುವಿನ ಧರ್ಮ.

★ **ಜಾಡ್ಯಸಂಗತಿ ೨೬** - ಜಡತ್ವದ ಸಂಬಂಧ

★ **ಜೀವ ೩೬** - ಪ್ರಾಣಧಾರಣೆ ಮಾಡಿರುವ ಆತ್ಮನು ಎಂದು ಅಕ್ಷರಾರ್ಥ : ಅಧಿಷ್ಠಾನಚೈತನ್ಯ, ಚಿದಾಭಾಸ, ಅಂತಃಕರಣ - ಈ ಮೂರರ ಒಟ್ಟೆಂದು ಈ ಗ್ರಂಥದಲ್ಲಿ ವಿವರಿಸಿದೆ. ಚಿದಾಭಾಸನನ್ನೇ ಜೀವನೆಂದು ಕೆಲವು ಈಚಿನ ಗ್ರಂಥಗಳಲ್ಲಿ ಹೇಳಿದೆ.

★ **ತಾದಾತ್ಮ್ಯಸಂಬಂಧ ೫೪** - ಅದರ ಸ್ವರೂಪವೇ ಆಗಿರುವದು ; ಭೇದಸಹಿತ ಅಭೇದಸಂಬಂಧವೆಂಬ

ಅರ್ಥದಲ್ಲಿ ಈಚಿನ ವೇದಾಂತಗ್ರಂಥಗಳಲ್ಲಿ ಬಳಕೆ.

★ **ಪೂರ್ಣಾನಂದ ೧೧** - ವಿಷಯ ಸುಖಕ್ಕಿಂತ ಬೇರೆಯಾದ ಬ್ರಹ್ಮಾನಂದ, ಇದು ಬ್ರಹ್ಮಸ್ವರೂಪವೇ.

★ **ಮಠಾಕಾಶ ೪೨** - ಮಠದೊಳಗಿನ ಬಯಲು ; ಈ ಶಬ್ದವು ಪ್ರಸ್ಥಾನತ್ರಯ ಭಾಷ್ಯದಲ್ಲಿ ಕಂಡುಬಂದಿಲ್ಲ.

★ **ಮಹಾಕಾಶ ೪೨** - ದೊಡ್ಡ ಬಯಲು, ಉಪಾಧಿಯ ಅಳತೆಯಿಲ್ಲದ ಬಯಲು.

**ಮಾಯಾ ೩೯, ೪೦** - ಈಶ್ವರನ ಉಪಾಧಿ ; ಇದರಲ್ಲಿ ಈಶ್ವರನು ಪ್ರತಿಬಿಂಬಿತನಾಗಿರುವನೆಂದು ಹೇಳುವದು ಈಗಿನ ವೇದಾಂತಿಗಳಲ್ಲಿ ರೂಢಿ.

★ **ಮಾಯಾತೀತ ೨೦** - ಮಾಯೆಯನ್ನೂ ಮೀರಿರುವ, ಮಾಯೆಯ ಸಂಬಂಧವಿಲ್ಲದ.

**ಲಿಂಗ, ಲಿಂಗದೇಹ ೩೧, ೩೨** - ಸೂಕ್ಷ್ಮಶರೀರ ಇದರಲ್ಲಿ ಮನಸ್ಸೂ ಜ್ಞಾನೇಂದ್ರಿಯಗಳೂ ಸೇರಿವೆ.

**ವಿಕಾರ ೯** - ಮಾರ್ಪಾಡುಗಳು, ಕಾರ್ಯಗಳು.

★ **ವಿವರ್ತ ೩, ೪೬** - ಭ್ರಾಂತಿಯಿಂದ ತೋರುವದು.

★ **ವಿಷಯಾನಂದ ೧೦** - ಶಬ್ದಸ್ಪರ್ಶಾದಿಗಳನ್ನು ಅನುಭವಿಸಿದರೆ ತೋರುವ ಸುಖ.

★ **ಶುದ್ಧಚಿದ್ಘನ ೩೦** - ಮತ್ತೊಂದರ ಸಂಬಂಧವಿಲ್ಲದ ಅರಿವಿನ ರೂಪವಾದ ಆತ್ಮ.

★ **ಸಂವಿದ್ರೂಪ ೬೪** - ಚೈತನ್ಯ ರೂಪನಾದ ಆತ್ಮ

★ **ಸತ್ಯಚಿದ್ಘನ ೪೪** - ಸತ್ಯವೂ ಅರಿವಿನ ಗಟ್ಟಿಯೂ ಆದ ಆತ್ಮ.

**ಸಾಕ್ಷಿ ೧೪** - ಅನಾತ್ಮವೆಲ್ಲವನ್ನೂ ಬೆಳಗುತ್ತಿರುವ ಚೈತನ್ಯ

**ಸ್ಥೂಲದೇಹ ೩೦** - ಮಾಂಸಾದಿಗಳಿಂದಾಗಿರುವ ಪ್ರಸಿದ್ಧ ದೇಹ.

----೦----

## ೪. ಶ್ಲೋಕಾದ್ಯ ಪಾದಾನುಕ್ರಮಣಿಕೆ


| | | | |
|---|---|---|---|
| ★ ಅಜ್ಞಾನೇ ಬುದ್ಧಿವಿಲಯೇ | ೫೮ | ಇನ್ದ್ರಿಯಾಣಿ ಮನಃ ಪ್ರಾಣಾ | ೨೬ |
| ಅಧಿಷ್ಠಾನಂ ಚಿದಾಭಾಸೋ | ೩೬ | ಉಲೂಕಸ್ಯ ಯಥಾ ಭಾನೌ | ೪೭ |
| ಅಧಿಷ್ಠಾನಂ ನ ಜೀವಃ ಸ್ಯಾತ್ | ೩೭ | ಏವಂ ತತ್ತ್ವವಿಚಾರಾಬ್ಧೌ | ೬೮ |
| ಅನಾದ್ಯಜ್ಞಾನಮೇವಾತ್ರ | ೩೩ | ಏವಂ ಶಿಷ್ಯವಚಃ ಶ್ರುತ್ವಾ | ೪ |
| ಅಸ್ಥಿಮಾಂಸಪುರೀಷಾನ್ನ | ೩೦ | ಕಾಯಃ ಕರೋತು ಕರ್ಮಾಣಿ | ೨೩ |
| ಅತ್ರಾನುಮಜ್ಞಾನಾಪೇಕ್ಷ | ೨೭ | ಕಾಲತ್ರಯೇ ಯಥಾ ಸರ್ಪೋ | ೫೨ |
| ★ ಅನನ್ಯರೂಪೋಽಯಮುತ್ಪನ್ನಬೋಧ | ೨೯ | ಕ್ಷುತ್ತೃಷಾಽಽನ್ಧ್ಯಬಾಧಿರ್ಯ | ೩೨ |
| [illegible] | ೨೫ | ★ ಘಟಾಕಾಶಮಠಾಕಾಶೌ | ೪೨ |

| | |
|---|---|
| ಘಟಾವಭಾಸಕೋ ಭಾನುಃ | ೧೪ |
| ಚಿದಮೃತಸುಖರಾಶೌ | ೨೮ |
| ಚಿದೇವ ದೇಹಸ್ತು ಚಿದೇವ ಲೋಕಾಃ | ೧೯ |
| ಚಿದ್ರೂಪತ್ವಾನ್ನ ಮೇ ಜಾಡ್ಯಮ್ | ೫೧ |
| ಜಗತ್ಕಾರಣಮಜ್ಞಾನಮ್ | ೧ |
| ಜಡತ್ವಪ್ರಿಯಮೋದತ್ವ- | ೩೪ |
| *ಜನ್ಮಮೃತ್ಯುಸುಖದುಃಖವರ್ಜಿತಮ್ | ೪೬ |
| ಜಲಬಿನ್ದುಭಿರಾಕಾಶಮ್ | ೫೫ |
| ಜೀವಾದ್ಭಿನ್ನಃ ಪರೇಶೋಽಸ್ತಿ | ೩೫ |
| ತರಙ್ಗತ್ವಂ ಧ್ರುವಂ ಸಿನ್ಧುಃ | ೧೦ |
| ತಸ್ಮಾದೇತತ್ತ್ರಯಂ ಮಿಥ್ಯಾ | ೪೧ |
| ದಾರಿದ್ರ್ಯಾಶಾ ಯಥಾ ನಾಸ್ತಿ | ೧೨ |
| ದೇಶಾಭಾವಾತ್ ಕ್ವ ಗನ್ತವ್ಯಮ್ | ೬೨ |
| ನ ಮೇ ಬನ್ಧೋ ನ ಮೇ ಮುಕ್ತಿಃ | ೨೦ |
| ನ ಹಿ ಪ್ರಪಞ್ಚೋ ನ ಹಿ ಭೂತಜಾತಮ್ | ೧೭ |
| ನಾಡೀಷು ಪೀಡ್ಯಮಾನಾಸು | ೬೪ |
| ನಿರಾಕಾರಂ ಜಗತ್ಸರ್ವಮ್ | ೧೩ |
| ಪರಿಪೂರ್ಣಸ್ಯ ನಿತ್ಯಸ್ಯ | ೬೧ |
| ಪಿಷ್ಟಂ ವ್ಯಾಪ್ಯ ಗುಡಂ ಯದ್ವತ್ | ೧೧ |
| ಪುಣ್ಯಾನಿ ಪಾಪಕರ್ಮಾಣಿ | ೨೨ |
| ಪೂರ್ಣತ್ವಾನ್ನಿರ್ವಿಕಾರತ್ವಾತ್ | ೪೦ |
| *ಪೂರ್ಣಮದ್ವಯಮಖಣ್ಡಚೇತನಮ್ | ೪೫ |
| ಪ್ರತ್ಯೇಕಂ ಜೀವತಾ ನಾಸ್ತಿ | ೩೮ |
| ಪ್ರಾಣಸಞ್ಚಾರಸಂಶೋಷಾತ್ | ೬೩ |
| ಪ್ರಾಣಾಶ್ಚರನ್ತು ತದ್ಧರ್ಮೈಃ | ೨೪ |
| *ಬನ್ಧಮೋಕ್ಷಾದಯಃ ಸರ್ವೇ | ೫ |
| *ಬುದ್ಧೇಃ ಪೂರ್ಣವಿಕಾಸೋಽಯಮ್ | ೫೯ |
| ಬ್ರಹ್ಮಾದಿಕಂ ಜಗತ್ಸರ್ವಮ್ | ೧೬ |
| ಬ್ರಹ್ಮಾದಿಸ್ತಮ್ಬಪರ್ಯನ್ತಾಃ | ೯ |
| ಭಾನೌ ತಮಃ ಪ್ರಕಾಶತ್ವಾತ್ | ೫೩ |
| ಮರುಭೂಮೌ ಜಲಂ ಸರ್ವಮ್ | ೮ |
| *ಮಾಯಾತತ್ಕಾರ್ಯವಿಲಯೇ | ೪೩ |
| ಮಾಯಾಭಾಸೋ ವಿಶುದ್ಧಾತ್ಮಾ | ೩೯ |
| ಮೂಢಬುದ್ಧಿಪರಿವ್ಯಾಪ್ತಮ್ | ೬೭ |
| ಯಥಾ ದೃಷ್ಟಿನಿರೋಧಾರ್ಥೋ | ೪೮ |
| ಯಥಾಮೃತಂ ವಿಷಾದ್ಭಿನ್ನಮ್ | ೪೯ |
| ಯಥಾ ಶೀತಂ ಜಲಂ ವಹ್ನಿಃ | ೫೪ |
| ಯಥೇಕ್ಷುಮಭಿಸಂವ್ಯಾಪ್ಯ | ೭ |
| ಯೋಷಿತ್ಕ್ರೀಡಾಸುಖಾಸಕ್ತಃ | ೬೬ |
| ರಾಜ್ಯಂ ಕರೋತು ವಿಜ್ಞಾನೀ | ೨೧ |
| ವಿವರ್ತೋಽಪಿ ಪ್ರಪಞ್ಚೋ ಮೇ | ೩ |
| ವಿವೇಕಯುಕ್ತಬುದ್ಧ್ಯಾಹಮ್ | ೨ |
| ವಿಷಂ ದೃಷ್ಟ್ವಾಽಮೃತಂ ದೃಷ್ಟ್ವಾ | ೧೩ |
| ವೃಕ್ಷೋತ್ಪನ್ನಫಲೈರ್ವೃಕ್ಷೋ | ೫೬ |
| ಶರೀರಸ್ಥಿತಿಶೈಥಿಲ್ಯಮ್ | ೬೫ |
| *ಸತ್ಯಚಿದ್ಘನಮನನ್ತಮದ್ವಯಮ್ | ೪೪ |
| ಸರ್ಪಾದೌ ರಜ್ಜುಸತ್ತೇವ | ೬ |
| ಸರ್ವಂ ಸುಖಂ ವಿದ್ಧಿ ಸದುಃಖನಾಶಾತ್ | ೧೮ |
| *ಸೂಕ್ಷ್ಮನಾಡೀಷು ಸಞ್ಚಾರಾತ್ | ೬೧ |
| ಸ್ಥಾಣೌ ಪ್ರಕಲ್ಪಿತಶ್ಚೋರಃ | ೫೭ |
| ಸ್ಥೂಲದೇಹಾಶ್ರಿತಾ ಏತೇ | ೩೧ |
| ಸ್ವಲ್ಪಾಪಿ ದೀಪಕಲಿಕಾ | ೫೦ |


----o----

ಹೀಗೆ ನಕ್ಷತ್ರ ಚಿಹ್ನೆಯಿಂದ ಗುರುತುಮಾಡಿರುವ ಶ್ಲೋಕಗಳು **ವರಾಹೋಪನಿಷತ್**ನಲ್ಲಿರುತ್ತವೆ.

# ವೇದಾಂತದ ಕೆಚ್ಚನ್ನು ಬಿಚ್ಚಿತೋರಿಸುವ ಕೆಲವು ಪ್ರಕರಣ ಗ್ರಂಥಗಳು

೧. **ಸವಾರ್ತಿಕ ಪಂಚೀಕರಣ** - ಇದು ಶಂಕರಾಚಾರ್ಯರ ಕೃತಿಯೆಂದು ಪ್ರಸಿದ್ಧವಾಗಿರುವ ಪ್ರಕರಣ. ಶ್ರೀ ಸುರೇಶ್ವರಾಚಾರ್ಯರವರ ವಾರ್ತಿಕವನ್ನೂ ಈ ಎರಡು ಗ್ರಂಥಗಳ ಭಾವಾರ್ಥ, ವಿಶೇಷಟಿಪ್ಪಣಿ, ಗ್ರಂಥಕರ್ತರ ವಿಚಾರದ ಪರಿಶಿಷ್ಟ, ಶಬ್ದಾನುಕ್ರಮಣಿಕೆ ಇವೆಲ್ಲಾ ಇವೆ. ಪಾಠಾಂತರ ಸಮೇತ ಮೂಲವನ್ನು ಎಡಗಡೆಯಲ್ಲಿಯೂ ಭಾವಾರ್ಥವನ್ನು ಬಲಗಡೆಯಲ್ಲಿಯೂ ಅಚ್ಚುಮಾಡಿಸಿದೆ.

(ಎರಡನೆಯ ಮುದ್ರಣ : ೨೦೦೦ ಪು. ಕ್ರೌನ್ ೯ +೫೨)

೨. **ವಾಕ್ಯವೃತ್ತಿ ಮತ್ತು ಲಘುವಾಕ್ಯವೃತ್ತಿ** : ಶ್ರೀಶಂಕರಾಚಾರ್ಯರ ಕೃತಿಯೆಂದು ಪ್ರಸಿದ್ಧವಾಗಿರುವ ಈ ಪ್ರಕರಣಗಳೆರಡಕ್ಕೂ ಮೂಲ, ಭಾವಾರ್ಥ, ಟಿಪ್ಪಣಿ, ಶ್ಲೋಕಾನುಕ್ರಮಣಿಕೆ, ಪ್ರಮಾಣವಚನಗಳ ಅನುಕ್ರಮಣಿಕೆ, ವಿದೇಹ ಮುಕ್ತಿವಿಚಾರದ ಪರಿಶಿಷ್ಟ, ಶಬ್ದಾನುಕ್ರಮಣಿಕೆ ಇಷ್ಟನ್ನೂ ಕೊಟ್ಟಿದೆ.

(ಎರಡನೆಯ ಮುದ್ರಣ : ೨೦೦೦, ಪು. ಕ್ರೌನ್ ೧೦+ ೪೬)

೩. **ದೃಗ್ದೃಶ್ಯವಿವೇಕ** ಶಂಕರಾಚಾರ್ಯರ ಕೃತಿಯೆಂದು ಪ್ರಸಿದ್ಧವಾಗಿರುವ ಈ ಗ್ರಂಥವನ್ನು ಮೂಲ, ಭಾವಾರ್ಥ, ಟಿಪ್ಪಣಿ, ಗ್ರಂಥದ ಸಾರ, ಶ್ಲೋಕಾನುಕ್ರಮಣಿಕೆ, ವಿಷಯವಿವೇಚನೆಯ ಪೀಠಿಕೆ ಇಷ್ಟು ಪರಿಕರಗಳೊಡನೆ ಪ್ರಕಟಿಸಿದೆ. (ಎರಡನೆಯ ಮುದ್ರಣ : ೧೯೯೯, ಪು.ಕ್ರೌನ್. ೧೨+೪೬)

೪. **ಆತ್ಮಬೋಧ** : ಶ್ರೀಶಂಕರಾಚಾರ್ಯರ ಕೃತಿಯೆಂದು ಪ್ರಸಿದ್ಧವಾದ ಪ್ರಕರಣಗ್ರಂಥ. ಮೂಲ, ಭಾವಾರ್ಥ, ಟಿಪ್ಪಣಿ, ಉಪಮಾನಗಳ ಪರಿಶಿಷ್ಟ, ಪ್ರಮಾಣಸ್ಥಾನಸೂಚಿ, ಶ್ಲೋಕಾನುಕ್ರಮಣಿಕೆ ಇಷ್ಟೂ ಇವೆ.

(ನಾಲ್ಕನೆಯ ಮುದ್ರಣ : ೧೯೯೪, ಪು. ಕ್ರೌನ್ ೪ + ೨೮)

---

೫. **ಸ್ವಾತ್ಮಪ್ರಕಾಶಿಕೆ** : ನಮ್ಮ ಆತ್ಮನಲ್ಲಿ ಯಾವ ಸಂಸಾರದ ಸೆಲೆಯೂ ಇಲ್ಲವೆಂಬುದನ್ನು ಮನಸ್ಸಿಗೆ ತಂದುಕೊಳ್ಳುವದಕ್ಕೆ ಇಲ್ಲಿ ಒಳ್ಳೊಳ್ಳೆಯ ವಿಚಾರ ತರಂಗಗಳು ಇವೆ. ಮೂಲ, ಭಾವಾರ್ಥ ಟಿಪ್ಪಣಿ, ಶ್ಲೋಕಾನುಕ್ರಮಣಿಕೆ, ಸೂತ್ರಭಾಷ್ಯದಲ್ಲಿರುವ ಜೀವೇಶ್ವರವರ್ಣನೆಯ ಪರಿಶಿಷ್ಟ, ಉಪಮಾನಗಳ ಪಟ್ಟಿ ಶಬ್ದಾನುಕ್ರಮಣಿಕೆ ಇಷ್ಟೂ ಇವೆ. **ಇದು ನಿಮ್ಮ ಕೈಯಲ್ಲಿದೆ.**

(ಎರಡನೆಯ ಮುದ್ರಣ : ೨೦೦೦ ಪು. ಕ್ರೌನ್ ೬ + ೩೨)